# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**

ತನ್ನ ಇಂದ್ರಿಯಗಳ ಮೇಲೆ ಹತೋಟಿ ಇಟ್ಟು
ಕೊಳ್ಳಲಾಗದವನು ಇಡೀ ಪ್ರಪಂಚವನ್ನೇ
ಗೆದ್ದು ಬೀಗಿದರೂ ಫಲ ಸಿಗಲಾರದು..
ಸಕಲ ಚರಾಚರ ವಸ್ತುಗಳ ಪರಮ ಹಿತನು
ಶ್ರೀಹರಿಯೇ ಎಂಬ ಸತ್ಯವನು ಅರಿಯದವನು
ಕವಯತ್ರಿಯಾಗಿ ಜ್ಞಾನಭಂಡಾರ ಎಂಬ
ಬಿರುದು ಪಡೆದರೂ ಸುಖ ಲಭಿಸಲಾರದು..
ಮೂಲವನ್ನೇ ಅರಿತು ಬಾಳಲಾಗದವನು
ಎಂದಿಗೂ ಮನುಷ್ಯನಾಗಲು ಸಾಧ್ಯವಾಗದು..

**ಭಗವಾನ್ ಶ್ರೀಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 04-04-2025 to 10-04-2025 ಬೆಲೆ: 7-00 ಸಂಪುಟ–4 ಸಂಚಿಕೆ–41 ಪುಟಗಳು–6











ಬೇಸಿಗೆಯ ಬಿರು ಬಿಸಿಲು ಜನರನ್ನು ಹಿಂಡಿ ಹಿಪ್ಪೆ ಮಾಡಲು ಪ್ರಾರಂಬಿಸಿದೆ. ಇಂತಹ ಬಿಸಿಲಿನಲ್ಲಿ ಪ್ರಾಣಿ ಪಕ್ಷಿಗಳಿಗೂ ನೀರಿನ ಅವಶ್ಯಕತೆ ಇದೆ. ಅದರಲ್ಲೂ ನಗರ ಪ್ರದೇಶಗಳಲ್ಲಿ ಪಕ್ಷಿಗಳು ನೀರಿಲ್ಲದೆ ಸಾಯಬಹುದು. ಆದ್ದರಿಂದ ನಮ್ಮ ಮನೆಯ ಅಕ್ಕಪಕ್ಕದಲ್ಲಿ ಒಂದು ಪಾತ್ರೆಯಲ್ಲಿ ನೀರು ಮತ್ತು ಸ್ವಲ್ಪ ಕಾಳುಗಳನ್ನು ಇಟ್ಟರೆ ಪುಟ್ಟ ಪುಟ್ಟ ಪಕ್ಷಿಗಳ ನೀರಿನ ಮತ್ತು ಆಹಾರದ ಕೊರತೆ ನೀಗಿ, ಅವುಗಳು ಬದುಕಲು ಅನುವು ಮಾಡಿಕೊಟ್ಟ ಹಾಗಾಗುತ್ತದೆ.

## ಜನಾಭಿಪ್ರಾಯ ಬಂದರೆ ನೂರಕ್ಕೆ ನೂರು ಹೊಸ ಪಕ್ಷ: ಯತ್ನಾಳ್



**ವಿಜಯಪುರ:** ಹೊಸ ರಾಜಕೀಯ ಪಕ್ಷ ಕಟ್ಟಲಿ ಎಂದು ಜನಾಭಿಪ್ರಾಯ ಬಂದರೆ ನೂರಕ್ಕೆ ನೂರು ರಾಜ್ಯದಲ್ಲಿ ನಾವು ಹೊಸ ರಾಜಕೀಯ ಪಕ್ಷವನ್ನು ಮುಂದಿನ ವಿಜಯದಶಮಿ ದಿನ ಉದ್ಘಾಟನೆ ಮಾಡುತ್ತೇವೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ಹಿಂದೂ ನಾಯಕರನ್ನು ಮೂಲೆಗುಂಪು ಮಾಡುವ ಕುತಂತ್ರವನ್ನು ಯಡಿಯೂರಪ್ಪ ಕುಟುಂಬ ಮಾಡುತ್ತಿದೆ. ಜನಾಭಿಪ್ರಾಯ ಆಧಾರದ ಮೇಲೆ ನಾವು ನಿರ್ಣಯ ಕೈಗೊಳ್ಳುತ್ತೇವೆ. ಜನ ಏನು ಹೇಳುತ್ತಾರೆ ಅದನ್ನು ನಾವು ಮಾಡುತ್ತೇವೆ. ನಾವು ಜನರನ್ನು ಬಿಟ್ಟು ಇರುವುದಿಲ್ಲ" ಎಂದರು. ಮುಂದಿನ ಮುಖ್ಯಮಂತ್ರಿಯಾಗಿ ವಿಜಯೇಂದ್ರ ಅವರನ್ನು ಬಿಂಬಿಸುವುದಾದರೆ ರಾಜ್ಯದ ಜನ ರಾಜ್ಯದ **3ನೇ ಪುಟಕ್ಕೆ**

## ಜನ ದಂಗೆ ಏಳದೇ ವಿಧಿ ಇಲ್ಲ –ಹೆಚ್‌ಡಿಕೆ



**ಬೆಂಗಳೂರು:** ಡೀಸೆಲ್ ದರ ಏರಿಕೆಗೆ ವಿಪಕ್ಷ ನಾಯಕರು ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. ಜನ ದಂಗೆ ಏಳದೇ ವಿಧಿ ಇಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆಕ್ರೋಶ ಹೊರಹಾಕಿದ್ದಾರೆ. ಬೆಲೆ ಏರಿಕೆ ಮಾಧ್ಯಮ ಹೇಳಿಕೆ ಬಿಡುಗಡೆ ರಾಜ್ಯ ಸರಕಾರ ದಿನಕ್ಕೊಂದು ಸುಳ್ಳು ಹೇಳುತ್ತಿದೆ. ತಿಂಗಳಿಗೊಂದು ದರ ಏರಿಕೆ ಮಾಡುತ್ತಿದೆ. ಜನಪೀಡಕ, ದರ ಬೀಜಾಸುರ ಸರಕಾರದಿಂದ ರಾಜ್ಯದ ಜನತೆಗೆ ಇನ್ನೊಂದು ಶಾಕ್ ನೀಡಿದೆ. ಕಳೆದ ಹತ್ತು ತಿಂಗಳಲ್ಲಿ ಡಿಸೇಲ್ ಪ್ರತಿ ಲೀಟರಿಗೆ 5 ಏರಿಕೆ ಭಾಗ್ಯ ಕೊಟ್ಟಿರುವ ರಾಜ್ಯ ಕಾಂಗ್ರೆಸ್ ಸರಕಾರ, ಯುಗಾದಿ ಹೊಸ ತೊಡಕು ದಿನವೇ ಹೊಸ ದರ ವಿಧಿಸಿ ದರ ಬೀಜಾಸುರ ಸರ್ಕಾರ ವಿಜೃಂಭಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಳಿಗ್ಗೆ ನಿದ್ರೆಯಿಂದ ಜನರೆದ್ದರೆ ಸುಲಿಗೆ ಬರೆ ಹಾಕುತ್ತಿದೆ. ಕರ್ನಾಟಕ ಈಸ್ಟ್ ಇಂಡಿಯಾ ಕಾಂಗ್ರೆಸ್ ಕಂಪನಿ ಸರ್ಕಾರ. ಕೈ ಕಂಪನಿ ಸರಕಾರಕ್ಕೆ ಕಣ್ಣಿಲ್ಲ, ಕರುಣೆಯೂ ಇಲ್ಲ. ಕಿತ್ತು ತಿನ್ನುವ ವಿಕೃತಿಯನ್ನು ಹತ್ತಿಕ್ಕಲು ಜನ ದಂಗೆ ಏಳದೇ ವಿಧಿ ಇಲ್ಲ ಎಂದಿದ್ದಾರೆ. ಹಾಲಿನ ದರ ಏರಿಕೆ ಮಾಡಿದ್ದಾಯ್ತು, ಕಸ ಸಂಗ್ರಹಣ ಮೇಲೆ ಸೆಸ್ ಹಾಕಿದ್ದಾಯ್ತು, ಈಗ ಏಕಾಏಕಿ ಡೀಸೆಲ್ ಬೆಲೆಯನ್ನು ಲೀಟರ್‌ಗೆ 2 ರೂಪಾಯಿ ಏರಿಕೆ ಮಾಡಿದೆ ಈ ದರಿದ್ರ ಕಾಂಗ್ರೆಸ್ **3ನೇ ಪುಟಕ್ಕೆ**

## ಬಿಜೆಪಿಯವರು ರೈತ ವಿರೋಧಿಗಳು: ಡಿಸಿಎಂ ಡಿಕೆಶಿ



**ಬೆಂಗಳೂರು:** "ರೈತರಿಗೆ ನೆರವಾಗಲು ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡಿದ್ದು, ಇದರ ವಿರುದ್ಧ ಪ್ರತಿಭಟನೆ ಮಾಡುತ್ತಿರುವ ಬಿಜೆಪಿಗರು ರೈತ ವಿರೋಧಿಗಳು" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು. ಸದಾಶಿವನಗರ ನಿವಾಸದ ಬಳಿ ಬಿಜೆಪಿಯ ಹೋರಾಟದ ಬಗ್ಗೆ ಪ್ರತಿಕ್ರಯಿಸಿದ ಅವರು, "ನಾವು ವಿದ್ಯುತ್ ಬೆಲೆ ಕಡಿಮೆ ಮಾಡಿದಾಗ ಅವರು ಮಾತನಾಡಲಿಲ್ಲ. ಅವರಿಗೆ ಜನರ ಮೇಲೆ ಕಾಳಜಿ ಇದ್ದರೆ, ಪೆಟ್ರೋಲ್, ಡೀಸೆಲ್, ಜಾನುವಾರುಗಳಿಗೆ ಹಾಕುವ ಬೂಸಾ ದರಗಳನ್ನು ಇಳಿಸಲಿ. ಬೆಲೆ ಏರಿಕೆ ನಂತರವೂ **3ನೇ ಪುಟಕ್ಕೆ**







# ಸಂಪಾದಕೀಯ

ಕರಾವಳಿ ತರಂಗಿಣಿ

## ಬದಲಾವಣೆ ಜಗದ ನಿಯಮ

– ಲಲಿತಶ್ರೀ ಪ್ರೀತಮ್ ರೈ



ನಮ್ಮಮ್ಮ ಯಾವಾಗಲೂ ಒಂದು ಗಾದೆ ಮಾತು ಹೇಳುತ್ತಿದ್ದರು "ಕಾಲಕ್ಕೆ ತಕ್ಕಂತೆ ಕೋಲ" ಅಂತ. ಅಮ್ಮ ಈ ಮಾತನ್ನು ಅದ್ಯಾವ ಅರ್ಥದಲ್ಲಿ ಹೇಳುತ್ತಿದ್ದರೋ ನನಗಂತೂ ತಿಳಿಯದು. ಯಾಕೆಂದರೆ ಅಮ್ಮನ ಇದೊಂದು ಮಾತು ನನಗೆ ಅರ್ಥವಾಗಿರಲಿಲ್ಲ. ಆದರೆ ಜಗತ್ತು ಬದಲಾದಂತೆ ನಾವೂ ಬದಲಾಗಬೇಕು ಎನ್ನುವ ಸತ್ಯವನ್ನಂತೂ ಈಗ ನಾನು ಅರಿತುಕೊಂಡಿದ್ದೇನೆ. ನಾವು ಬದಲಾಗುವುದು ತಪ್ಪಲ್ಲ, ಅಪ್ಪ ಹಾಕಿದ ಆಲದ ಮರದಲ್ಲಿ ನೇತಾಡುತ್ತೇನೆ ಎಂದರೆ ಅದು ತಪ್ಪಾಗುತ್ತದೆ, ಹಾಗಂತ ನಮ್ಮ ಸಂಸ್ಕೃತಿಯ ನಿಜವಾದ ಮೌಲ್ಯಗಳನ್ನು ಗ್ರಹಿಸದೆ ಅದನ್ನು ತಿರಸ್ಕರಿಸಿ ಈ ಆಧುನಿಕತೆಯನ್ನು ಪೂರ್ಣವಾಗಿ ಅಪ್ಪಿಕೊಳ್ಳುವುದು ತಪ್ಪು. ಅದೆಂತಹ ವಿಶೇಷ ಸಂಸ್ಕೃತಿಯುಳ್ಳ ದೇಶ ನಮ್ಮದು. ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳೇ ವಿಭಿನ್ನ. ವಿವಿಧತೆಯಲ್ಲಿ ಏಕತೆಯನ್ನು ಸಾರಿದ ದೇಶ ನಮ್ಮದು. ನಮ್ಮ ಈ ನೆಲದ ಆಚರಣೆಗಳನ್ನು ನೋಡಿದರೆ ನಾವು ಈ ಪ್ರಕೃತಿ ಪ್ರಾಣಿ ಪಕ್ಷಿಗಳಿಗೆ ಅದೆಷ್ಟು ಪೂಜ್ಯನೀಯ ಸ್ಥಾನ ಕೊಟ್ಟಿದ್ದೇವೆ ಎನ್ನುವುದು ತಿಳಿಯುತ್ತದೆ. ನಮ್ಮ ಈ ಸಂಸ್ಕೃತಿಯು ಅದೆಷ್ಟು ಆಳವಾದ ಬೇರನ್ನೂರಿದೆ ಎನ್ನುವುದನ್ನು ತಿಳಿದುಕೊಂಡು, ನಮ್ಮ ಸಂಸ್ಕೃತಿಯ ಸೆಳೆತಕ್ಕೆ ಅದೆಷ್ಟೋ ಪಾಶ್ಚಾತ್ಯರು ನಮ್ಮನ್ನು ಅನುಸರಿಸಲಿಲ್ಲವೇ ಹೇಳಿ?. ಆದರೆ ನಮ್ಮಲ್ಲಿಯೇ ನಮ್ಮ ಸಂಸ್ಕೃತಿಯ ಒಲವು ಕಡಿಮೆಯಗುತ್ತಿರುವುದು ಬೇಸರದ ಸಂಗತಿ. ನಮ್ಮ ಬದಲಾವಣೆಯ ನಾಗಾಲೋಟದಲ್ಲಿ ನಮ್ಮ ಸಂಸ್ಕೃತಿಯ ತಾಯಿ ಬೇರಿಗೆ ಪೆಟ್ಟು ಬೀಳದಂತೆ ಸಂರಕ್ಷಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು. ಈ ಆಧುನಿಕತೆಯ ಬೇರು ಯಾವ ರೀತಿ ನಮ್ಮ ದೈನಂದಿನ ಬದುಕಿನಲ್ಲಿ ಬೇರೂರಿದೆ ಎನ್ನುವುದನ್ನು ಅವಲೋಕಿಸಿದರೆ, ಆಧುನಿಕತೆಯ ಆಡಂಬರದಲ್ಲಿ ಮೈಮರೆತು ಭ್ರಮಾಲೋಕದಲ್ಲಿ ಯಾಂತ್ರಿಕವಾಗಿ ಕಳೆದು ಹೋಗುತ್ತಿರುವ ನಮ್ಮಿಂದ ನಮ್ಮ ಮುಂದಿನ ಪೀಳಿಗೆ ಆದುನಿಕತೆಯ ಹಾದಿಯಲ್ಲಿ ನಡೆದು ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಂತಹ ನಮ್ಮ ಸಂಸ್ಕೃತಿ, ಆಚಾರ, ವಿಚಾರಗಳನ್ನು ಹೇಗೆ ಮುಂದುವರಿಸಿಕೊಂಡು ಹೋಗಬಹುದು ಎನ್ನುವುದೇ ಪ್ರಶ್ನಾರ್ಥಕ ಚಿಹ್ನೆಯಾಗಿದೆ. ನಾವು ಕಾಲದ ತುಳಿತದಿಂದ ತಪ್ಪಿಸಿಕೊಂಡಷ್ಟೂ ಜಾಣರಾಗಿದ್ದೇವೆ ಎಂದೂ ಬೀಗುತ್ತಿದ್ದೇವೆ ಅಷ್ಟೇ. ಆದರೆ ಬದುಕಿನಲ್ಲಿ ನಡೆದು ಬಹಳಷ್ಟು ದೂರ ಬಂದಾಗ ಒಮ್ಮೆಯಾದರೂ ಹಿಂದಿರುಗಿ ನೋಡುವ ಅನಿವಾರ್ಯತೆ ಇದೆ. ನಾವು ಇಂದಿನ ದೈನಂದಿನ ಜೀವನ ಜಂಜಾಟದಲ್ಲೂ ಆಧುನಿಕತೆಯ ಹುರುಳಿಲ್ಲದ ಮೆರಗನ್ನು ಅನುಸರಿ ಸುತ್ತಿರುವುದು ವಿಷಾದಕರ ಸಂಗತಿ. ಬದುಕೇ ಹಾಗೆ ಎಲ್ಲವೂ ನಮ್ಮ ಅವಶ್ಯಕತೆ-ಅನಿವಾರ್ಯಕ್ಕೆ ತಕ್ಕಹಾಗೆ ಎಲ್ಲವನ್ನು ಬದಲಿಸಿ ಬಿಡುತ್ತದೆ. ನಿನ್ನೆಯ ವಿಚಾರ ಮಾಯವಾಗಿ ಇಂದಿನ ವಿಚಾರ ಪ್ರತಿಧ್ವನಿಸುತ್ತಿರುತ್ತದೆ. ಜೀವನ ಶೈಲಿ ಬದಲಾಗಿದೆ, ನೋಡುವ ನೋಟ ಬದಲಾಗಿದೆ, ನಮ್ಮ ಯೋಚನಾ ಲಹರಿಯೂ ಬದಲಾಗಿದೆ, ಊಟ ಆಟ ಪಾಟ ಎಲ್ಲವೂ ಬದಲಾಗಿದೆ. ಕೆಲವರ ಜೀವನ ಶೈಲಿ ಬದಲಾದರೆ ಇನ್ನೂ ಕೆಲವರ ಜೀವನದ ದಿಕ್ಕೇ ಬದಲಾಗಿದೆ. ಹಾಗಂತ ನಮ್ಮತನವನ್ನು ನಾವು ಮರೆತು ಬದಲಾಗಬಾರದು. ಹಾಗೇನದರೂ ಬದಲಾದರೆ ಮುಂದೆ ನಮ್ಮ ಅಸ್ತಿತ್ವವೇ ನಶಿಸಿ ಹೋದಂತಾಗುತ್ತದೆ ಎನ್ನುವುದು ಸತ್ಯ. ನಮ್ಮ ಬದಲಾವಣೆ ಯಾರದ್ದೋ ಒತ್ತಾಯಕ್ಕೆ ಮಣಿದು ಆದಾಗ ಆ ಬದಲಾವಣೆ ನಮ್ಮ ಬದುಕಿಗೆ ಮಾರಕವಾಗಬಹುದು. ಇಂತಹ ಬದಲಾವಣೆಗಳು ನಮಗೆ ಒಗ್ಗಿದಾಗ ಮಾತ್ರ ಜೀವನ ಸುಸೂತ್ರವಾಗಿ ನಡೆಯಲು ಸಾಧ್ಯ. ಉದಾಹರಣೆಗೆ ನಮ್ಮ ಹಿರಿಯರು ಎಲ್ಲೋ ಹಳ್ಳಿಯಲ್ಲಿ ಸ್ವಚಂದವಾಗಿ ಬದುಕುತ್ತಿದ್ದವರನ್ನು ಕರೆತಂದು ಪಟ್ಟಣದ ಪಂಜರದಲ್ಲಿ ಕೂಡಿಹಾಕಿದರೆ ಅವರು ಇಲ್ಲಿ ಒಗ್ಗಿಕೊಳ್ಳಲು ಸಾಧ್ಯವೇ? ಒಟ್ಟಿನಲ್ಲಿ ಬದಲಾವಣೆ ಜಗದ ನಿಯಮ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಬದಲಾವಣೆಯೊಂದೇ ಶಾಶ್ವತ. ಈ ಬದಲಾವಣೆಯ ಜೊತೆಯಲ್ಲಿಯೇ ನಮ್ಮ ಸಂಸ್ಕೃತಿಯ ಬೇರನ್ನು ಗಟ್ಟಿಗೊಳಿಸಿ, ಶತಶತಮಾನಗಳಿಂದ ಈ ನೆಲದಲ್ಲಿ ಬೇರೂರಿರುವಂತಹ ನಮ್ಮ ಆಚಾರ, ವಿಚಾರಗಳನ್ನು ನಮ್ಮ ಯುವಪೀಳಿಗೆಗೆ ಪಸರಿಸುತ್ತಾ ಅವರಿಗೆ ದಾರಿ ದೀಪವಾಗೋಣ...

# ಸಂಪ್ರದಾಯ

## ಮೌನಿ ಅಮಾವಾಸ್ಯೆ



ಪುಷ್ಯ ಮಾಸದಲ್ಲಿ ಬರುವ ವಿಶೇಷವಾಗಿ ಮೌನಿ ಅಮಾವಾಸ್ಯೆ ಕರೆಯುತ್ತಾರೆ. ಈ ಅಮಾವಾಸ್ಯೆಯಂದು ಮಾಡುವ ಪ್ರಮುಖ ಆಚರಣೆಯೇ ಪವಿತ್ರ ತೀರ್ಥ ಸ್ನಾನ. ಈ ದಿನ ಪವಿತ್ರ ನದಿಗಳಲ್ಲಿ ಸ್ನಾನ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದೆಂದು ಹೇಳಲಾಗುತ್ತದೆ. ಕೆಲವು ಭಕ್ತರು ಈ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಯಾರೊಂದಿಗೂ ಮಾತನಾಡದೇ ತೀರ್ಥ ಸ್ನಾನ ಮಾಡಿ ದಿನ ಪೂರ್ತಿ ಮೌನಾಚರಣೆ ಮಾಡುವುದು ಕೂಡ ರೂಢಿಯಲ್ಲಿದೆ. ಕೆಲವೊಂದು ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖವಿರುವಂತೆ ದ್ವಾಪರಯುಗವು ಈ ದಿನದಂದು ಆರಂಭವಾಯಿತು ಎಂದು ಹೇಳಲಾಗುತ್ತದೆ. ಜೊತೆಗೆ ಗಂಗೆಯ ನೀರು ಈ ದಿನ ಅಮೃತವಾಗುವುದೆಂದು, ಈ ಪವಿತ್ರ ನೀರಿನಲ್ಲಿ ಸ್ನಾನ ಮಾಡಿದರೆ ಆರೋಗ್ಯದೊಂದಿಗೆ ಮೋಕ್ಷವೂ ಪ್ರಾಪ್ತಿಯಾಗುವುದೆಂದು ಕೂಡ ಹೇಳಲಾಗುತ್ತದೆ. ಗಂಗಾನದಿಯಂತಹ ಪವಿತ್ರ ಪುಣ್ಯ ನದಿಗಳಲ್ಲಿ ಈ ದಿನ ಸ್ನಾನ ಮಾಡುವುದರಿಂದ ಮಾನಸಿಕ ಮಾತ್ರವಲ್ಲದೇ ದೈಹಿಕ ಸಮಸ್ಯೆಗಳೂ ನಿವಾರಣೆಯಾಗಿ, ಸಕಲ ಪಾಪಗಳೂ ಪರಿಹಾರವಾಗುತ್ತದೆ ಎಂದು ನಂಬಲಾಗುತ್ತದೆ. ಪುರಾಣದ ಪ್ರಕಾರ ಈ ದಿನದಂದು ಋಷಿ ಮನು ಜನಿಸಿದ ಕಾರಣದಿಂದ ಈ ಅಮಾವಾಸ್ಯೆಯನ್ನು ಮೌನಿ ಅಮಾವಾಸ್ಯೆಯೆಂದು ಕರೆಯಲಾಯಿತು ಎನ್ನುವುದು ಕೂಡ ಉಲ್ಲೇಖವಿದೆ. ಈ ಅಮಾವಾಸ್ಯೆಯಂದು ಎಣ್ಣೆ, ಎಳ್ಳು, ಧಾನ್ಯ ಮತ್ತು ಬೆಚ್ಚಗಿನ ಬಟ್ಟೆಗಳನ್ನು ದಾನ ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುವುದೆಂದು ಎಂದೂ ಹೇಳಲಾಗುತ್ತದೆ.

# ಕ್ಷೇತ್ರದರ್ಶನ




ಶ್ರೀ ಗೋಕರ್ಣೇಶ್ವರ

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿರುವ ಗೋಕರ್ಣ ಕಡಲತೀರದಲ್ಲಿರುವ ಪ್ರಸಿದ್ಧವಾದ ಯಾತ್ರಾ ಸ್ಥಳವೇ ಶ್ರೀ ಕ್ಷೇತ್ರ ಗೋಕರ್ಣ. ಪುರಾಣಗಳ ಪ್ರಕಾರ, ಕೈಲಾಸಾಧಿಪತಿಯಾದ ರಾವಣನ ತಾಯಿ ಕೈಕಸೆ ಲಿಂಗಪೂಜೆಯನ್ನು ಮಾಡಲು ನಿಶ್ಚಯಿಸಿ ಸಮುದ್ರದಲ್ಲಿ ಸ್ನಾನ ಮಾಡಿ ಮರಳು ಲಿಂಗವನ್ನು ಪೂಜಿಸುತ್ತಿದ್ದಳು. ಆಗ ಅಲೆಗಳು ಲಿಂಗವನ್ನು ಕೊಚ್ಚಿಕೊಂಡು ಹೋಗಲು, ಕೈಕಸೆ ದುಃಖಿಸುತ್ತಾ ಮಗನಾದ ರಾವಣನಿಗೆ ತಿಳಿಸುತ್ತಾಳೆ. ಆಗ ದುಃಖಿಸಬೇಡ ಶಿವನನ್ನು ತಪಸ್ಸಿನಿಂದ ಒಲಿಸಿ ಅವನು ಪೂಜಿಸುವ ಆತ್ಮಲಿಂಗವನ್ನೇ ತಂದು ಕೊಡುತ್ತೇನೆಂದು ಸಮಾಧಾನ ಪಡಿಸಿ ಕೈಲಾಸಕ್ಕೆ ಹೋಗುತ್ತಾನೆ. ಆಗ ಅವನಿಗೆ ಕೈಲಾಸವನ್ನೇ ಲಂಕೆಗೆ ತೆಗೆದುಕೊಂಡು ಹೋದರೆ ಚೆನ್ನಾಗಿರುತ್ತದೆ ಎನಿಸಿ, ತನ್ನ ಇಪ್ಪತ್ತು ತೋಳುಗಳ ಬಲದಿಂದ ಕೈಲಾಸವನ್ನು ಎತ್ತಲು ಪ್ರಯತ್ನಿಸಿದಾಗ ಕೈಲಾಸವು ಅಲುಗಾಡಿತು. ಆಗ ಪಾರ್ವತಿಯು ಭಯಗೊಳ್ಳುತ್ತಾಳೆ. ಶಿವನು ಪಾರ್ವತಿಯನ್ನು ಸಮಾಧಾನಪಡಿಸಿ ತನ್ನ ಎಡಗಾಲಿನಿಂದ ಭೂಮಿಗೆ ಒತ್ತುತ್ತಾನೆ ಆಗ ರಾವಣನ ಕೈಗಳು ಪರ್ವತದ ಬುಡದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಆದರೂ ನೋವಿನಲ್ಲಿ ನರಳುತ್ತ ಶಿವನ ಕುರಿತು ತಪಸ್ಸನ್ನು ಮಾಡುತ್ತಾನೆ. ಅದಕ್ಕೂ ಶಿವ ಪ್ರಸನ್ನನಾಗದಿದ್ದಾಗ ತನ್ನ ತಲೆಯನ್ನೇ ಕಡಿದು ಬುರುಡೆಯನ್ನು ತಯಾರಿಸಿ ದೇಹದ ನಾಳಗಳಿಂದ ತಂತಿಯನ್ನು ಮಾಡಿ ಸಾಮಗಾನವನ್ನು ಹಾಡುತ್ತಾನೆ. ರಾವಣನ ಸಾಮಗಾನಕ್ಕೆ ರುದ್ರ ಪ್ರಸನ್ನನಾಗಿ ಬೇಕಾದ ವರವನ್ನು ಬೇಡೆಂದನು. ರಾವಣನು ತನ್ನ ತಾಯಿಯು ನಿತ್ಯವೂ ಪೂಜಿಸಲು ನಿನ್ನಿಂದ ಪೂಜಿಸಲ್ಪಡುವ ಪ್ರಾಣಲಿಂಗವನ್ನು ಕೊಡಬೇಕೆಂದು ಕೇಳುತ್ತಾನೆ. ಶಿವನು ಆತ್ಮಲಿಂಗವನ್ನು ರಾವಣನಿಗೆ ಕೊಡುತ್ತಾ ಇದನ್ನು ಭೂಮಿಯಲ್ಲಿ ಇಟ್ಟಿದ್ದಾದರೆ ಅದು ಅಲ್ಲೇ ನಿಲ್ಲುತ್ತದೆ ಎನ್ನುತ್ತಾನೆ. ಆತ್ಮ ಲಿಂಗವನ್ನು ಹಿಡಿದು ರಾವಣ ಲಂಕೆಗೆ ಹೊರಟ. ಇದೆಲ್ಲವನ್ನೂ ಗಮನಿಸಿದ ನಾರದನು ದೇವತೆಗಳಿಗೆ ತಿಳಿಸುತ್ತಾರೆ. ದೇವತೆಗಳು ಗಣಪತಿಯ ಸಹಾಯ ಬೇಡುತ್ತಾರೆ. ವಿಷ್ಣುವು ರಾವಣನಿಗೆ ಸಂಧ್ಯಾಕಾಲವೆಂಬ ಭ್ರಮೆಯನ್ನು ಉಂಟು ಮಾಡುತ್ತಾನೆ. ರಾವಣನು ಸೂರ್ಯಾಸ್ತವಾದದ್ದನ್ನು ನೋಡಿ ಸಂಧ್ಯಾವಂದನೆಯನ್ನು ಮಾಡಬೇಕು, ಆದರೆ ಲಿಂಗವನ್ನು ಭೂಮಿಯ ಮೇಲೆ ಇಡುವಂತಿಲ್ಲ, ಏನು ಮಾಡಲಿ? ಎಂದು ಆಲೋಚಿಸುತ್ತಿರುವಾಗ ವಟುವೇಷಧಾರಿಯಾದ ಗಣಪತಿಯನ್ನು ಕಂಡು, ಈ ಲಿಂಗವನ್ನು ಸ್ವಲ್ಪ ಹಿಡಿದುಕೊಂಡಿರು ನಾನು ಸಂಧ್ಯಾವಂದನೆಯನ್ನು ಮುಗಿಸಿ ಬರುವರೆಗೆ ಭೂಮಿಯ ಮೇಲೆ ಇದನ್ನು ಇಡಬಾರದು ಎನ್ನುತ್ತಾನೆ. ಗಣಪತಿಯು ಲಿಂಗವನ್ನು ತೆಗೆದುಕೊಂಡು ಭಾರವಾಗಿದೆ, ನನ್ನಿಂದ ಹೆಚ್ಚು ಹೊತ್ತು ಹಿಡಿದುಕೊಳ್ಳಲು ಸಾಧ್ಯವಿಲ್ಲ ಮೂರು ಬಾರಿ ನಿನ್ನನ್ನು ಕರೆಯುತ್ತೇನೆ ಆಗ ಬರಬೇಕು, ಬರದಿದ್ದಲ್ಲಿ ಇದನ್ನು ಭೂಮಿಯ ಮೇಲೆ ಇಡುತ್ತೇನೆ ಎನ್ನುತ್ತಾನೆ. ಆಗ ರಾವಣನು ಅದಕ್ಕೆ ಒಪ್ಪುತ್ತಾನೆ. ರಾವಣ ಜಪವನ್ನು ಪ್ರಾರಂಭಿಸುತ್ತಿರುವಾಗ ಓ ರಾವಣಾ ಎಂದು ಮೂರನೇ ಬಾರಿ ಕೂಗುತ್ತಾನೆ. ರಾವಣನು ಓಡಿ ಬರುವುದೊಳಗಾಗಿ ಲಿಂಗವನ್ನು ಭೂಮಿಯ ಮೇಲೆ ಶಿವಸ್ಮರಣೆ ಮಾಡುತ್ತ ಇಟ್ಟೇ ಬಿಟ್ಟ. ರಾವಣನು ಸಿಟ್ಟಿನಿಂದ ಗಣಪತಿಯ ನೆತ್ತಿಯ ಮೇಲೆ ಮುಷ್ಠಿಯಿಂದ ಗುದ್ದುತ್ತಾನೆ. ಬಲಿಷ್ಟವಾದ ರಾವಣನ ಗುದ್ದಿನಿಂದ ನೆತ್ತಿಯ ಮೇಲೆ ಒಂದು ಕುಳಿಯಾಗಿ ಹೊಟ್ಟೆಯು ಕುಸಿಯಿತು. ಇಂದಿಗೂ ಗಣಪತಿ ವಿಗ್ರಹದಲ್ಲಿ ರಾವಣನು ಗುದ್ದಿದ ಕುರುಹನ್ನು ನೋಡಬಹುದು. ಮುಂದೆ ರಾವಣನು ತನ್ನ ಶಕ್ತಿಯ ಗರ್ವದಿಂದ ಲಿಂಗವನ್ನು ಎತ್ತಲು ಪ್ರಯತ್ನಿಸುತ್ತಾನೆ. ಆಗದಿದ್ದಾಗ ತನ್ನ ತಪಸ್ಸು ನಿಷ್ಪವಾದ ಸಿಟ್ಟಿನಿಂದ ಆತ್ಮಲಿಂಗವನ್ನು ಎಳೆಯುತ್ತಾನೆ. ಆಗ ಕೈಗೆ ಬಂದ ಆತ್ಮಲಿಂಗದ ಚೂರುಗಳನ್ನು ನಾಲ್ಕು ದಿಕ್ಕಿಗೆ ಬಿಸಾಕುತ್ತಾನೆ. ಅದುವೇ ಸಜ್ಜೇಶ್ವರ, ಗುಣವಂತೇಶ್ವರ, ಧಾರೇಶ್ವರ, ಮೃಡೇಶ್ವರ ಎಂಬ ಹೆಸರಿನಿಂದ ಪ್ರಖ್ಯಾತವಾಗಿವೆ. ತನ್ನ ರಾಕ್ಷಸ ಶಕ್ತಿಯು ಸೋತು ಹೋಗಲು ನೀನೇ ಮಹಾಬಲನೆಂದು ಕೂಗುತ್ತಾನೆ. ಆಕಾಲಕ್ಕೆ ದೇವತೆಗಳು ಪುಷ್ಪ ವೃಷ್ಟಿಗೈಯುತ್ತಾರೆ. ಪರಮೇಶ್ವರನು ಗಣಪತಿಯು ಲಿಂಗವನ್ನು ಸ್ಥಾಪಿಸಿದ್ದರಿಂದ ಮೊದಲು ಗಣ ಪತಿಯನ್ನು ಪೂಜಿಸಿ ನಂತರ ಆತ್ಮಲಿಂಗವನ್ನು ಪೂಜಿಸಬೇಕೆಂದು ಅಪ್ಪಣೆ ಮಾಡಿ ಆತ್ಮಲಿಂಗವನ್ನು ಭಕ್ತಿಯಿಂದ ಪೂಜಿಸುವ ಭಕ್ತರ ಇಷ್ಟಾರ್ಥಗಳು ಕೈಗೂಡುವವು. ತಾನು ಇಲ್ಲಿಯೇ ವಾಸವಾಗುತ್ತೇನೆಂದು ಹೇಳಿ ಅಂತರ್ಧಾನನಾದನು. ನಂತರ ರಾವಣನು ತಾಯಿಯೊಡನೆ ಗೋಕರ್ಣಕ್ಕೆ ಬಂದು ಗಣಪತಿಯನ್ನೂ, ಆತ್ಮಲಿಂಗವನ್ನೂ ಭಕ್ತಿಯಿಂದ ಪೂಜಿಸಿದನು ಎನ್ನಲಾಗುತ್ತದೆ. ಈ ಕ್ಷೇತ್ರದಲ್ಲಿ ಪಿತೃ ಕಾರ್ಯ ಮಾಡಿದ್ದಲ್ಲಿ ಸದ್ಗತಿ ದೊರೆ ಯುತ್ತದೆ ಎನ್ನುವುದು ನಂಬಿಕೆ.

## ವೈದ್ಯೋನಾರಾಯಣೋ ಹರಿಃ

# ಕಹಿ ಬೇವು




ಆಯುರ್ವೇದ, ಮನೆ ಮದ್ದು ಮತ್ತು ಧಾರ್ಮಿಕ ವಿಧಿ ವಿದಾನಗಳಲ್ಲಿ ಉಪಯೋಗಿಸಲ್ಪಡುವ ಕಹಿ ಬೇವಿಗೆ ಹಿಂದೂ ಧರ್ಮದಲ್ಲಿ ಮಹತ್ವದ ಸ್ಥಾನವಿದೆ. ಹಾಗೆಯೇ ಕಹಿಬೇವಿನಲ್ಲಿ ಅತ್ಯುತ್ತಮ ಬ್ಯಾಕ್ಟೀರಿಯಾ ನಿವಾರಕ ಗುಣ, ಉರಿಯೂತ ನಿವಾರಕ ಗುಣ, ಪ್ರತಿಜೀವಕ ಗುಣ ಮತ್ತು ಶಿಲೀಂಧ್ರ ನಿವಾರಕ ಗುಣಗಳಿದ್ದು, ಇದರಲ್ಲಿ ವಿಟಮಿನ್ ಇ ಅತ್ಯುತ್ತಮ ಪ್ರಮಾಣದಲ್ಲಿದೆ. ಚರ್ಮದ ಆರೈಕೆಗೆ ಈ ಪೋಷಕಾಂಶದ ಅತಿ ಹೆಚ್ಚು ಅವಶ್ಯಕತೆ ಇದೆ.

ಒಂದು ಮುಷ್ಠಿಯಷ್ಟು ತಾಜಾ ಕಹಿಬೇವಿನ ಎಲೆಗಳನ್ನು ಚೆನ್ನಾಗಿ ಅರೆದು ನೇರವಾಗಿ ತ್ವಚೆಗೆ ಹಚ್ಚಿಕೊಳ್ಳುವುದರಿಂದ ತ್ವಚೆಯ ಎಲ್ಲಾ ಸಮಸ್ಯೆಗಳನ್ನು ನಿವಾರಿಸಬಹುದು

ಕಹಿಬೇವಿನ ಎಲೆಗಳನ್ನು ನುಣ್ಣಗೆ ಅರೆದು ದಪ್ಪನೆಯ ಲೇಪ ತಯಾರಿಸಿ, ಅದಕ್ಕೆ ಕಡ್ಲೆಹಿಟ್ಟು ಮತ್ತು ಗುಲಾಬಿ ನೀರನ್ನು ಬೆರೆಸಿ ಮುಖಕ್ಕೆ ಹಚ್ಚುವುದರಿಂದ ಮೊಡವೆ ಮೂಲದಿಂದಲೇ ಇಲ್ಲವಾಗುತ್ತದೆ.

ಕಹಿಬೇವಿನ ಎಲೆಗಳನ್ನು ಎರಡು ದೊಡ್ಡ ಚಮಚ ಮೊಸರಿನೊಂದಿಗೆ ನುಣ್ಣಗೆ ಅರೆಯಿರಿ. ಈ ಲೇಪವನ್ನು ಮುಖದ ಮೇಲೆ ತೆಳುವಾಗಿ ಮುಖದ ಮೇಲಿನ ಕಲೆ ಮಾಯವಾಗುತ್ತದೆ.

ಬೇವಿನ ಎಣ್ಣೆಯನ್ನು ಹಚ್ಚುವ ಮೂಲಕ ಒಣಗುವ ಚರ್ಮ, ಚರ್ಮದ ತುರಿಕೆ, ಕೆಂಪಗಾಗುವುದು ನಿವಾರಣೆಯಾಗುತ್ತವೆ

ಬೇವಿನ ಬೀಜದ ಹಿಂಡಿ ಕೃಷಿಯಲ್ಲಿ ಉಪಯೋಗಿಸುವುದರಿಂದ ಮಣ್ಣಿನ ಸತ್ವವನ್ನು ಹೆಚ್ಚಾಗುತ್ತದೆ.

ಒಂದು ಹಿಡಿ ಬೇವಿನ ಸೊಪ್ಪನ್ನು ನೀರು ಸೇರಿಸಿ ನುಣ್ಣಗೆ ಅರೆದು ಬಟ್ಟೆಯಲ್ಲಿ ಶೋಧಿಸಿ ರಸ ತೆಗೆದು ಸ್ವಲ್ಪ ಕೆಂಪು ಕಲ್ಲುಸಕ್ಕರೆ ಸೇರಿಸಿ ಹೊತ್ತಿಗೆ ಎರಡು ಟೀ ಚಮಚ ರಸ ಕುಡಿದರೆ ಕಾಮಲೆಗೆ ಔಷದಿಯಾಗಬಲ್ಲದು.

ಹಸಿ ಬೇವಿನ ಬೀಜಗಳನ್ನು ನೀರಿನೊಂದಿಗೆ ನುಣ್ಣಗೆ ಅರೆದು ತಲೆಗೆ ಮಂದವಾಗಿ ಲೇಪಿಸಿ, ಮೂರರಿಂದ ನಾಲ್ಕು ಗಂಟೆಗಳ ನಂತರ ತಲೆ ತೊಳೆದರೆ ತಲೆಯಲ್ಲಿನ ಹೇನು ಕಡಿಮೆಯಾಗುತ್ತದೆ.

ಪ್ರತಿನಿತ್ಯ ಎರಡು ಬೇವಿನ ಎಲೆಗಳನ್ನು ತಿನ್ನುವುದರಿಂದ ರಕ್ತ ಶುದ್ಧಿಯಾಗಿ ಚರ್ಮ ವಾಧಿಗಳು ಕಡಿಮೆಯಾಗುತ್ತದೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ನಮ್ಮ ಪ್ರಕೃತಿಯು ನಮಗೆ ದಯಮಾಡಿಸಿರುವ ಅದೆಷ್ಟೋ ಉಡುಗೊರೆಯಲ್ಲಿ ಜಲಪಾತಗಳು ಸೇರಿವೆ. ಈ ಜಲಪಾತಗಳ ಮುಂದೆ ಸೋಲದಿರುವ ಮನಸುಗಳಿರಲು ಸಾಧ್ಯವೇ? ಇನ್ನು ಕವಿ ಪುಂಗವರಿಗೆ ಈ ಪ್ರಕೃತಿ ಒಂದು ವರದಾನವೇ ಸರಿ. ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನಿಂದ 54 ಕಿ.ಮೀ ದೂರದಲ್ಲಿರುವ ಸೂಚಿಪರ್ಣ ಕಾಡುಗಳ ಸದಾಹಸಿರಿನ ಸಿರಿಯನ್ನು ಉಣಿಸುವ ಚಿರಾಪುಂಜಿಯ ಖಾಸಿ ಬೆಟ್ಟಗಳ ನಡುವೆ ಧುಮ್ಮಿಕ್ಕುವ 'ನೊಹ್ಕಾಲಿಕೈ' ಜಲಧಾರೆ ಭಾರತದಲ್ಲಿನ ಅತಿ ಎತ್ತರದ ಧುಮುಕು ಜಲಪಾತವಾದರೆ, ಅತಿ ಹೆಚ್ಚು ಎತ್ತರದಿಂದ ಧುಮ್ಮಿಕ್ಕುವ ವಿಶ್ವದ ನಾಲ್ಕನೇ ಜಲಪಾತವಾಗಿದೆ. ಈ ಜಲಪಾತದ ಆಸುಪಾಸಿನಲ್ಲಿ ಕಿರು ಜಲಧಾರೆಗಳೂ ಕಾಣಿಸುತ್ತವೆ. ಬೆಟ್ಟಗಳ ಸರಣಿಯಲ್ಲಿ ಸುಮಾರು 340 ಮೀಟರ್ (1115 ಅಡಿ) ಎತ್ತರದಿಂದ ಧುಮ್ಮಿಕ್ಕುವ ಈ ಜಲಧಾರೆ ಮುಂದೆ ಚಿರಾಪುಂಜಿಯ ಕಾಡನ್ನೆಲ್ಲಾ ಸುತ್ತಾಡುತ್ತಾ ಕೊನೆಗೆ ಬ್ರಹ್ಮಪುತ್ರ ನದಿಗೆ ಸೇರುತ್ತದೆ.



ಈ ಜಲಪಾತಕ್ಕೆ ಕಾಲಿಕೈ ಎಂಬ ದುರಂತ ಮಹಿಳೆಯ ಹೆಸರನ್ನು ಇಡಲಾಗಿದೆ. ಖಾಸಿ ಭಾಷೆಯ ಜಲಪಾತದ ಹೆಸರು 'ಜಂಪ್ ಆಫ್ ಕಾಲಿಕೈ' ಎಂಬ ಅರ್ಥವನ್ನು ಕೊಡುವ ಸ್ಥಳೀಯ ಮಹಿಳೆ ಲಿಕಾಯ್‌ಯ ದಂತ ಕಥೆಯನ್ನು ಆಧರಿಸಿದೆ. ದಂತಕಥೆಯ ಪ್ರಕಾರ ಲಿಕಾಯ್ ಎಂಬ ವಿದವೆ ಮಹಿಳೆಯೊಬ್ಬಳು ಒಂದು ಹಳ್ಳಿಯಲ್ಲಿ ವಾಸಿಸುತ್ತಿದ್ದಳು. ಅವಳಿಗೆ ಒಂದು ಪುಟ್ಟದಾದ ಹೆಣ್ಣು ಮಗುವಿತ್ತು. ಜೀವನ ನಡೆಸಲು ಉದ್ಯೋಗವನ್ನು ಹುಡುಕಿದಳು. ಹೆಚ್ಚು ಕಾಲ ಅವಳ ಪುಟ್ಟ ಮಗುವಿನ ಜೊತೆಗೆ ಕಾಲ ಕಳೆಯಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಕೆಲಸವಿಲ್ಲದಿದ್ದಗಾ ತನ್ನ ಪುಟ್ಟದಾದ ಮಗುವ ಕಾಳಜಿಯನ್ನು ವಹಿಸುತ್ತಿದ್ದಳು. ತನ್ನ ಒಂಟಿತನದಿಂದ ಬೇಸತ್ತ ಲಿಕಾಯ್ ಮರು ಮದುವೆಯಾದಳು. ಆದರೆ ಅವಳು ತನ್ನ ಗಂಡನಿಗಿಂತ ಹೆಚ್ಚಾಗಿ ತನ್ನ ಮಗುವ ಬಗ್ಗೆ ಕಾಳಜಿ ವಹಿಸುತ್ತಿದ್ದದ್ದು ಎರಡನೇ ಗಂಡನಿಗೆ ಇಷ್ಟವಾಗುತ್ತಿರಲಿಲ್ಲ. ಈ ಅಸೂಯೆಯಿಂದ ಪತಿಯು ಆ ಪುಟ್ಟ ಮಗುವನ್ನು ಕೊಂದು ಆ ಮಗುವಿನ ಮಾಂಸದಲ್ಲಿ ಅಡುಗೆ ತಯಾರಿಸುತ್ತಾನೆ. ಅದನ್ನು ಅರಿಯದ ಅವಳು ಅಡುಗೆ ಮನೆಗೆ ಹೋಗಿ ಮಾಂಸವನ್ನು ತಿನ್ನುತ್ತಾಳೆ. ಊಟದ ನಂತರ ಕೆಲಸದ ವೇಳೆ ಅವಳಿಗೆ ಕತ್ತರಿಸಿದ್ದ ಬೆರಳುಗಳು ಸಿಗುತ್ತದೆ. ಅನುಮಾನ ಬಂದು, ಕೋಪ ಹಾಗು ದುಃಖದಿಂದ ಹುಚ್ಚಿಯಾಗಿ, ತನ್ನ ಮಗುವನ್ನು ನೆನೆದು ಅವಳು ಈ ಜಲಪಾತಕ್ಕೆ ಜಿಗಿಯುತ್ತಾಳೆ. ಅದ್ದರಿಂದಲೇ ಚಿರಾಪುಂಜಿಯಲ್ಲಿರುವ ಈ ಜಲಪಾತವನ್ನು ದುರಂತ ನೊಕಲಿಕಾಕಿ ಫಾಲ್ಸ್ ಎಂದು ಕರೆಯಲಾಗುತ್ತದೆ. ಚಿರಾಪುಂಜಿಯ ಮೂಲ ಹೆಸರು ಸೂಹರ, ಆದರೆ ಬ್ರಿಟಿಷರು 'ಚುರ್ರಾ" ಎಂದು ಕರೆಯುತ್ತಿದ್ದರು. ಮುಂದೆ ಅದಕ್ಕೆ ಚಿರಾಪುಂಜಿ ಎಂದು ಹೆಸರು ಬಂತು. ಚಿರಾಪುಂಜಿ ಎಂದರೆ "ಕಿತ್ತಳೆ ಭೂಮಿ" ಎನ್ನುವ ಅರ್ಥ. ಇಲ್ಲಿ ಧೀರ್ಘಕಾಲಿಕ ಮಳೆ ಹೊರ ತಾಗಿಯೂ ತೀವ್ರ ನೀರಿನ ಕೊರತೆಯನ್ನು ಅನುಭವಿಸುತಿತ್ತು. ಸಾಮಾನ್ಯ ಜನರು ಕುಡಿಯುವ ನೀರಿಗಾಗಿ ಗಂಟೆಗಟ್ಟಲೆ ನಡೆದು ಹೊಗಬೇಕಿತ್ತು. ಮುಂದೆ ಇಲ್ಲಿ ಶಾಶ್ವತ ನೀರಿನ ವ್ಯವಸ್ಥೆ ಕಲ್ಪಿಸಲಾಯಿತು. ಈಗ ಮೇಘಾಲಯ ಸಮೃದ್ಧ ಮತ್ತು ವೈವಿಧ್ಯಮಯ ಸಸ್ಯವರ್ಗಗಳಿಂದ ತುಂಬಿದೆ. ಶಿಲ್ಲಾಂಗ್ ಪ್ರಸ್ಥಭೂಮಿ ಕೂಡಾ ಇಲ್ಲಿ ಇದೆ. ಚಿರಾಪುಂಜಿಯಲ್ಲಿ ನೈಋತ್ಯ ಮತ್ತು ಈಶಾನ್ಯ ಎರಡೂ ದಿಕ್ಕಿನಿಂದಲೂ ಮಾನ್ಸೂನ್ ಮಾರುತ ತಡೆಯಲ್ಪಡುತ್ತದೆ. ಇಲ್ಲಿಯ ಜನರು ನೂರಾರು ವರ್ಷಗಳ ಕಾಲ ಬೆಳೆದಿರುವ ಮರಗಳ ಬೇರುಗಳಿಂದ ದೊಡ್ಡ ಸೇತುವೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಜಲಪಾತದ ಪಕ್ಕದಲ್ಲಿ ಅಕ್ಕ ತಂಗಿ ಜಲಪಾತ, (ಸೆವೆನ್ ಸಿಸ್ಟರ್ಸ್) ಮೌಸಮಿ ಸುಣ್ಣದ ಕಲ್ಲಿನ ಗುಹೆ, ವಾಕಾಬಾ ಜಲಧಾರೆ, ಲಿವಿಂಗ್ ರೂಟ್ ಅಣೆಕಟ್ಟು, ಸೆವೆನ್ ಸಿಸ್ಟರ್ಸ್ ಫಾಲ್ಸ್, ಮಾಕ್ದೊಕ್ ಡೈಮ್ಪೆಪ್ ವ್ಯಾಲಿ, ಇಕೊ ಪಾರ್ಕ್ ಮತ್ತು ಕಾ ಖೋಹ್ ರಾಮ್ಹಾ.. ಇನ್ನೂ ಅನೇಕ ರಮಣೀಯ ಸ್ಥಳಗಳಿವೆ. ಈ ಚಿರಾಪುಂಜಿ ಪ್ರದೇಶದಲ್ಲಿ ಸ್ಥಳೀಯರು ದಾಲ್ಚಿನ್ನಿ ಸ್ಟಿಕ್, ಮೆಣಸು, ಜೇನುತುಪ್ಪ ಮತ್ತು ಬೇ ಎಲೆಗಳು ಮುಂತಾದ ಕಾಡುತ್ಪತ್ತಿಗಳನ್ನು ಮತ್ತು ಸಾಂಬಾರು ಪಾದರ್ಥಗಳನ್ನು ಮಾರಾಟ ಮಾಡುತ್ತಾರೆ. ಚಿರಾಪುಂಜಿಯಲ್ಲಿ ವರ್ಷ ಪೂರ್ತಿ ಅದ್ಭುತ ವಾತಾವರಣವಿರುವುದರಿಂದ ಯಾವಾಗ ಬೇಕಾದರೂ ಭೇಟಿ ನೀಡಬಹುದಾಗಿದೆ.

# ಕಲ್ಪವೃಕ್ಷ

@ಪ್ರೀತಂ ರೈ ಇ

## 2 ನೇ ಲೆಫ್ಟಿನೆಂಟ್ ಜಯೇಂದ್ರ ಜೈ ಸಿಂಗ್ ರಾಣೆ

ಇಂಡೋ–ಪಾಕ್ 1971 ರ ಯುದ್ಧದ ಸಮಯದಲ್ಲಿ 2 ನೇ ಲೆಫ್ಟಿನೆಂಟ್ ಜಯೇಂದ್ರ ಜೈ ಸಿಂಗ್ ರಾಣೆ ಅವರ ಘಟಕ 5 ಗರ್ವಾಲ್ ಅನ್ನು ಪೂರ್ವ ವಲಯದಲ್ಲಿ ನಿಯೋಜಿಸಲಾಯಿತು. 202 ಮೌಂಟೇನ್ ಬ್ರಿಗೇಡ್‌ನ ಕಾರ್ಯಾಚರಣೆಯ ನಿಯಂತ್ರಣದಲ್ಲಿ ಹಿಂದಿನ ಪೂರ್ವ ಪಾಕಿಸ್ತಾನದ ಆಯಕಟ್ಟಿನ ಗಡಿ ಪಟ್ಟಣವಾದ ಹಿಲ್ಲಿ ಬಳಿ ಘಟಕವನ್ನು ನಿಯೋಜಿಸಲಾಗಿತ್ತು. ಭಾರತ–ಪಾಕ್ ಯುದ್ಧವು 03 ಡಿಸೆಂಬರ್ 1971 ರಂದು ಅಧಿಕೃತವಾಗಿ ಪ್ರಾರಂಭವಾದರೂ, ಪಾಕಿಸ್ತಾನಿ ವಾಯುಪಡೆಯು 11 ಭಾರತೀಯ ವಾಯುನೆಲೆಗಳ ಮೇಲೆ ದಾಳಿ ಮಾಡಿದಾಗ, ಗಡಿಯಾಚೆಗಿನ ನಿರಾಶ್ರಿತರು ನಡೆಸಿದ ದೌರ್ಜನ್ಯದ ಪರಿಣಾಮವಾಗಿ ತಿಂಗಳ ಹಿಂದೆಯೇ ಗಡಿ ಕದನಗಳು ಪ್ರಾರಂಭವಾಗಿದ್ದವು. ಪಾಕಿಸ್ತಾನಿ ಪಡೆಗಳು. 20 ಮೌಂಟೇನ್ ವಿಭಾಗದ ಕಾರ್ಯಾಚರಣೆಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿರುವ 202 ಮೌಂಟೇನ್ ಬ್ರಿಗೇಡ್‌ಗೆ ನವೆಂಬರ್ 1971 ರಲ್ಲಿ ಹಿಲ್ಲಿಯನ್ನು ವಶಪಡಿಸಿಕೊಳ್ಳಲು ಕಾರ್ಯ ವಹಿಸಲಾಯಿತು. ಹಿಲ್ಲಿ ಯುದ್ಧವು ಪೂರ್ವ ವಲಯದಲ್ಲಿ ಅತ್ಯಂತ ಘೋರವಾಗಿ ನಡೆದ ಯುದ್ಧವಾಗಿದೆ. ಹಿಲ್ಲಿ ಯುದ್ಧವು ಎರಡು ಹಂತಗಳಲ್ಲಿ ನಡೆಯಿತು, ಮೊದಲನೆಯದು ನವೆಂಬರ್ 22 ರಿಂದ 24 ರವರೆಗೆ ಮತ್ತು ಎರಡನೇ ಹಂತ 10 ಡಿಸೆಂಬರ್ 11 ರಿಂದ 1971 ರವರೆಗೆ. 2 ನೇ ಲೆಫ್ಟಿನೆಂಟ್ ಜಯೇಂದ್ರ ಜೈ ಸಿಂಗ್ ರಾಣೆ ಅವರ ಘಟಕ 5 ಗರ್ವಾಲ್ ಜೊತೆಗೆ 8 ಗಾರ್ಡ್‌ಗಳು ಮತ್ತು 22 MLI ಈ ಯುದ್ಧಕ್ಕಾಗಿ ಫಿರಂಗಿ ಮತ್ತು ರಕ್ಷಾಕವಚದ ಬೆಂಬಲದೊಂದಿಗೆ 202 Mtn Bde ಯಿಂದ




ಬದ್ಧರಾಗಿದ್ದರು. ಈ ಯುದ್ಧದ ಭಾಗವಾಗಿ ನಡೆಯುತ್ತಿರುವ ಕಾರ್ಯಾಚರಣೆಗಳ ಭಾಗವಾಗಿ, 5 ಗರ್ವಾಲ್‌ಗೆ 5 ಡಿಸೆಂಬರ್ 2 ರಂದು ಶತ್ರು ಪೋಸ್ಟ್ ಅನ್ನು ವಶಪಡಿಸಿಕೊಳ್ಳಲು ವಹಿಸಲಾಯಿತು. 5 ಗರ್ವಾಲ್‌ನ ಕಂಪನಿಯ ಕಮಾಂಡಿಂಗ್ ಆಗಿದ್ದ ಲೆಫ್ಟಿನೆಂಟ್ ರಾಣೆ ಅವರಿಗೆ ಈ ಕಾರ್ಯವನ್ನು ಕೈಗೊಳ್ಳಲು ಆದೇಶಿಸಲಾಯಿತು. 2 ನೇ ಲೆಫ್ಟಿನೆಂಟ್ ರಾಣೆ ತನ್ನ ಸೈನಿಕರೊಂದಿಗೆ 05 ಡಿಸೆಂಬರ್ 1971 ರಂದು ಯೋಜಿಸಿದಂತೆ ಶತ್ರು ಪೋಸ್ಟ್‌ನ ಮೇಲೆ ದಾಳಿಯನ್ನು ಪ್ರಾರಂಭಿಸಿದರು. ಆದಾಗ್ಯೂ ಕಂಪನಿಯು ಭಾರೀ ಶತ್ರುಗಳ ಗುಂಡಿನ ದಾಳಿಗೆ ಸಿಲುಕಿತು. ಗುಂಡಿನ ವಿನಿಮಯದ ಸಮಯದಲ್ಲಿ, 2 ನೇ ಲೆಫ್ಟಿನೆಂಟ್ ರಾಣೆ ಒಂದು ಕಾಲಿಗೆ ಗಂಭೀರವಾಗಿ ಗಾಯಗೊಂಡರು, ಆದರೆ ಅವರು ಇತರ ಎರಡು ತುಕಡಿಗಳನ್ನು ಹೊರತೆಗೆಯಲು ಒಂದು ತುಕಡಿಯನ್ನು ಒಂದು ಪಾರ್ಶ್ವಕ್ಕೆ ಕುಶಲತೆಯಿಂದ ನಡೆಸಿದರು. ಹಾಗೆ ಮಾಡುವಾಗ ಅವರ ಇನ್ನೊಂದು ಕಾಲಿಗೂ ಗುಂಡು ತಗುಲಿದೆ. ಆದರೆ ತನ್ನ ಸ್ವಂತ ಜೀವನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ತನ್ನ ಜನರನ್ನು ಹೊರಹಾಕಲು ಹೋರಾಟವನ್ನು ಮುಂದುವರೆಸಿದರು. ನಂತರ ತಮ್ಮ ಗಾಯಗಳಿಗೆ ಬಲಿಯಾದರು ಮತ್ತು ಯುದ್ಧ ಭೂಮಿಯಲ್ಲಿ ಹುತಾತ್ಮರಾದರು. 2ನೇ ಲೆಫ್ಟಿನೆಂಟ್ ರಾಣೆ ಒಬ್ಬ ಧೀರ ಸೈನಿಕ ಮತ್ತು ದೃಢನಿರ್ಧಾರದ ಅಧಿಕಾರಿಯಾಗಿದ್ದು, ಅವರು ತಮ್ಮ ಜನರನ್ನು ಮುಂಭಾಗದಿಂದ ಮುನ್ನಡೆಸಿದರು ಮತ್ತು ತಮ್ಮ ಕರ್ತವ್ಯದ ಸಾಲಿನಲ್ಲಿ 22 ವರ್ಷ ವಯಸ್ಸಿನಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. 2ನೇ ಲೆಫ್ಟಿನೆಂಟ್ ಜಯೇಂದ್ರ ಜೈ ಸಿಂಗ್ ರಾಣೆ ಅವರಿಗೆ ಯುದ್ಧದ ಸಮಯದಲ್ಲಿ ಅವರ ಅಸಾಧಾರಣ ಧೈರ್ಯ, ಅದಮ್ಯ ಮನೋಭಾವ ಮತ್ತು ಅತ್ಯುನ್ನತ ತ್ಯಾಗಕ್ಕಾಗಿ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. 2ನೇ ಲೆಫ್ಟಿನೆಂಟ್ ಜಯೇಂದ್ರ ಜೈ ಸಿಂಗ್ ರಾಣೆ ಅವರು ಮಧ್ಯಪ್ರದೇಶದ ಗ್ವಾಲಿಯರ್ ಜಿಲ್ಲೆಯವರು ಮತ್ತು 27 ಏಪ್ರಿಲ್ 1949 ರಂದು ಸೇನಾ ಅನುಭವಿ ಮೇಜರ್ JS ರಾವ್ ರಾಣೆಯವರ ಮಗನಾಗಿ ಜನಿಸಿದರು. ಕರಾವಳಿ ತರಂಗಿಣಿಯಿಂದ ಇವರಿಗೆ ಸಲ್ಯೂಟ್.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಈ ಸಮಾಜದಲ್ಲಿ ಹುಟ್ಟಿನಿಂದ ಸಾವಿನವರೆಗೂ ಒಂದಿಲ್ಲೊಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಾ ಬಂದಿರುವುದರಲ್ಲಿ ಸಂಶಯವಿಲ್ಲ. ಆದರೂ ಈ ಹೆಣ್ಣು ಅಬಲೆ ಎನ್ನುವ ಪಟ್ಟವನ್ನು ಹೊತ್ತುಕೊಂಡು ಅಡುಗೆ ಮನೆಯಿಂದ ಹೊರಟು ಇಂದು ವಿಶ್ವದ ಎಲ್ಲಾ ರಂಗಗಳಲ್ಲೂ ತನ್ನ ಚಾಕಚಕ್ಯತೆಯನ್ನು ಮೆರೆಯುವಲ್ಲಿ ಸಪಲವಾಗಿ ಸಬಲೆಯಾಗಿ ಈ ಸಮಾಜದಲ್ಲಿ ಎದ್ದು ನಿಲ್ಲುತ್ತಿದ್ದಾಳೆ ಮತ್ತು ನಿಂತಿದ್ದಾಳೆ. ಅಂತಹ ಹೆಣ್ಣಿನ ಕನಸಿಗೆ ತನ್ನ ಕುಟುಂಬದ ಒತ್ತಾಸೆಯೊಂದಿದ್ದರೆ ಏನನ್ನು ಬೇಕಾರೂ ಸಾದಿಸಬಲ್ಲಳು ಎನ್ನುವುದನ್ನು ನಿರೂಪಿಸುತ್ತಾ ಬಂದಿದ್ದಾಳೆ. ಹೆಣ್ಣಿಗೆ ಇಂದು ಬೇಕಾಗಿರುವುದು ಕರುಣೆಯಲ್ಲ, ಒಂದಿಷ್ಟು ಪ್ರೋತ್ಸಾಹವಷ್ಟೇ. ಆ ಪ್ರೋತ್ಸಾಹ ಒಂದಿದ್ದರೆ ತಾನು ಯಾರಿಗೂ ಕಡಿಮೆ ಇಲ್ಲ ಎನ್ನುವುದನ್ನು ಹೆಣ್ಣು ಸಾಬೀತು ಪಡಿಸುತ್ತಾಳೆ. ಇಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಆಯ್ಕೆ "ಶಿಲ್ಪಾ ಹೆಗ್ಡೆ" ಮೂಲತಃ ಉಡುಪಿ ಜಿಲ್ಲೆಯ ಪೆರ್ಡೂರು ಗ್ರಾಮದ ಮೋಹನ್ ದಾಸ್ ಹೆಗ್ಡೆ ಮತ್ತು ಶಶಿಕಲಾ ಹೆಗ್ಡೆ ದಂಪತಿಗಳ ಪುತ್ರಿ ಹಾಗೆಯೇ ಖ್ಯಾತ ಪತ್ರಕರ್ತ ವಡ್ಡರ್ಸೆ ರಘುರಾಮ ಶೆಟ್ಟರ ಮೊಮ್ಮಗಳು. ನಿಟ್ಟೆಯಲ್ಲಿ ಎಂಜಿನಿಯರಿಂಗ್ ಮಾಡಿ, ಉದ್ಯೋಗಕ್ಕಾಗಿ ಆಸ್ಟ್ರೇಲಿಯಾಕ್ಕೆ ತೆರಳಿದ್ದರು. ಅಲ್ಲಿನ ಡಿಡಬ್ಲುಎಸ್ ಗ್ಲೋಬಲ್ ಕಂಪನಿ ಐಟಿ ಕನ್ಸಲ್ಟೆಂಟ್ ಆಗಿರುವ ಶಿಲ್ಪಾ ಅವರ ಪತಿ ದಯಾನಂದ್ ಹೆಗ್ಡೆ ಕೂಡ ಅಲ್ಲಿಯೇ ಉದ್ಯಮಿಯಾಗಿದ್ದಾರೆ. ಅವರ ಕುಟುಂಬ ಕಳೆದ ಇಪ್ಪತ್ತು ವರ್ಷಗಳಿಂದ ಲಿಬರಲ್




ಪಾರ್ಟಿಯೊಂದಿಗೆ ಗುರುತಿಸಿಕೊಂಡಿದ್ದು, ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ನೇಮಕಗೊಂಡಿದ್ದಾರೆ. ಶಿಲ್ಪಾ ಆಸ್ಟ್ರೇಲಿಯಾದ ಲಿಬರಲ್ ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಆಸ್ಟ್ರೇಲಿಯಾದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವಾಗ ಪಕ್ಷದ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಮಿತಿ ಇದಾಗಿದೆ. 2013ರಲ್ಲಿ ನಡೆದ ಫೆಡರಲ್ ಚುನಾವಣೆಯಲ್ಲಿ ಶಿಲ್ಪಾ ಹೆಗ್ಡೆ ಮೆಲ್ಬರ್ನ್ ವಿಲ್ಸಿನಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಇದೀಗ ಅವರನ್ನು ಲಿಬರಲ್ ಪಕ್ಷದ ಉನ್ನತ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ನೇತೃತ್ವದ ಲಿಬರಲ್ ಪಾರ್ಟಿಯಿಂದ ವಿಕ್ಟೋರಿಯ ರಾಜ್ಯ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾಗ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ರಾಜ್ಯ ಕಮಿಟಿ ಇದಾಗಿತ್ತು. ಈ ಸಮಿತಿಯಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಆಸ್ಟ್ರೇಲಿಯಾದ ಜನಪ್ರಿಯ 10 ಮಹಿಳಾ ರಾಜಕಾರಣಿಗಳಲ್ಲಿ 2 ನೇ ಸ್ಥಾನ ಪಡೆದಿರುವ ಶಿಲ್ಪಾ, 20 ವರ್ಷಗಳಿಂದ ಆಸ್ಟ್ರೇಲಿಯಾದ ಲಿಬರಲ್ ಪಾರ್ಟಿಯಲ್ಲಿ ಪತಿ ದಯಾನಂದ ಹೆಗ್ಡೆ ಹಾಗೂ ಮನೆಯವರ ಸಹಕಾರದಿಂದ ಸಕ್ರಿಯವಾಗಿದ್ದು, ಆಸ್ಟ್ರೇಲಿಯಾ ಆಡಳಿತ ಕಮಿಟಿಯಲ್ಲಿ ಸ್ಥಾನ ಪಡೆದದ್ದು ಸಂತೋಷ ತಂದಿದೆ' ಎಂದು ಖುಷಿ ಹಂಚಿ ಕೊಳ್ಳುತ್ತಾರೆ. ನಮ್ಮ ನಾಡಿನ ಹೆಮ್ಮೆಯ ಪುತ್ರಿಯ ಕನಸುಗಳು ಕೈಗೂಡಿ ಭಾರತದ ಕೀರ್ತಿ ಪತಾಕೆ ವಿಶ್ವದೆಲ್ಲೆಡೆ ಪಸರಿಸುವಂತಾಗಲಿ ಎನ್ನುವುದು ಕರಾವಳಿ ತರಂಗಿಣಿಯ ಹಾರೈಕೆ

# ಜನಾಭಿಪ್ರಾಯ ಬಂದರೆ ನೂರಕ್ಕೆ ನೂರು ಹೊಸ ಪಕ್ಷ : ಯತ್ನಾಳ್

**ಒಂದನೇ ಪುಟದಿಂದ......**

ಅಭಿವೃದ್ಧಿಗೆ, ಸನಾತನ ಧರ್ಮ ರಕ್ಷಣೆ ಮಾಡುವ ನಿರ್ಣಯ ಕೈಗೊಳ್ಳುತ್ತಾರೆ. ವಿಜಯೇಂದ್ರ ಒಬ್ಬ ಮಹಾಭ್ರಷ್ಟ. ಇವನಿಂದಾಗಿಯೇ ಯಡಿಯೂರ ಪ್ಪಜೈಲಿಗೆ ಹೋದರು ಎಂದು ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ನಾವು ಈ ವಿಚಾರವಾಗಿ ಇವತ್ತಿನಿಂದಲೇ ಜನಜಾಗೃತಿ ಆರಂಭಿಸುತ್ತೇವೆ. ರಾಜ್ಯದಲ್ಲಿ ಹಿಂದು ರಕ್ಷಣೆಗಾಗಿ ಪಕ್ಷ ಕಟ್ಟಬೇಕು ಎಂದು ನನಗೆ ಬಹಳ ಜನ ಹೇಳುತ್ತಿದ್ದಾರೆ. ನನ್ನ ಹೋರಾಟ ಮೋದಿ ಅವರ ವಿರುದ್ಧ ಅಲ್ಲ, ಪಕ್ಷದ ವಿರುದ್ಧ ಅಲ್ಲ. ಇವರಿಗೆ ಯಡಿಯೂರಪ್ಪ ಕುಟುಂಬವೇ ಬೇಕು ಎಂದರೆ ನಾವು ಮುಕ್ತವಾಗಿ ಮುಂದಿನ ನಿರ್ಣಯ ಮಾಡುತ್ತೇವೆ. ಯಡಿಯೂರಪ್ಪನವರಿಗೆ ಕಾಂಗ್ರೆಸ್ ಜೊತೆ ಹೊಂದಾಣಿಕೆ ಇದೆ. ಡಿ.ಕೆ. ಶಿವಕುಮಾರ್ ಜೊತೆಗೆ ವ್ಯಾಪಾರ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಜನ ದಂಗೆ ಏಳದೇ ವಿಧಿ ಇಲ್ಲ– ಹೆಚ್‌ಡಿಕೆ

**ಒಂದನೇ ಪುಟದಿಂದ......**

ಸರ್ಕಾರ. ಡೀಸೆಲ್ ಅಂದರೆ ಅದು ಸರಕು ಸಾಗಾಣಿಕೆಗೆ ಉಪಯೋಗಿಸುವ ಇಂಧನ. ಡೀಸೆಲ್ ಬೆಲೆ ಹೆಚ್ಚಾದರೆ ಹಾಲು, ತರಕಾರಿ, ಹಣ್ಣು, ದಿನಸಿ, ಟ್ಯಾಕ್ಸಿ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ, ಸೇವೆಗಳ ಬೆಲೆ ಹೆಚ್ಚಾಗುತ್ತವೆ ತಿಳಿದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

# ಬಿಜೆಪಿಯವರು ರೈತ ವಿರೋಧಿಗಳು: ಡಿಸಿಎಂ ಡಿ.ಕೆ.ಶಿ

**ಒಂದನೇ ಪುಟದಿಂದ......**

ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಹಾಲು, ಮೊಸರಿನ ಬೆಲೆ ಕಡಿಮೆ ಇದೆ" ಎಂದು ಹೇಳಿದರು. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಬೆಲೆಯನ್ನು ಪ್ರತಿ ಲೀಟರ್‌ಗೆ ಕನಿಷ್ಠ 1 ಪೈಸೆಯಷ್ಟು ಏರಿಕೆ ಮಾಡಲೇಬೇಕಾಗಿದೆ. ಬಡವರಿಗೆ ಹೊರೆಯಾಗದಂತೆ ನೀರಿನದರ ಹೆಚ್ಚಳಕ್ಕೆ ಸೂಚನೆ ನೀಡಲಾಗಿದೆ. ಜಲ ಮಂಡಳಿ ವಾರ್ಷಿಕವಾಗಿ 1 ಸಾವಿರ ಕೋಟಿ ನಷ್ಟ ಅನುಭವಿಸುತ್ತಿದ್ದು, ಮುಂದಿನ ಹಂತಗಳ ಯೋಜನೆ ಕೈಗೆತ್ತಿಗೊಳ್ಳಬೇಕಾದರೆ ದರಏರಿಕೆ ಅನಿವಾರ್ಯ. ಇದಕ್ಕೂ ಮುನ್ನ ಜನರಿಗೂ ನೀರಿನ ಪ್ರಾಮುಖ್ಯತೆ ಅರಿಯುವಂತೆ ಮಾಡಬೇಕು ಎಂದು ತಿಳಿಸಿದರು. ಇನ್ನು ಕಸದ ವಿಚಾರವಾಗಿ ಹೇಳುವುದಾದರೆ, ಕೇಂದ್ರ ಬಿಜೆಪಿ ಸರ್ಕಾರ ಕಾನೂನು ಮಾಡಿದ್ದು, ಬಿಜೆಪಿ ಸರ್ಕಾರ 2022ರಲ್ಲೇ ದುಬಾರಿ ಸೆಸ್ ವಿಧಿಸಿದ್ದರು. ನಾವು ಅದನ್ನು ಕಡಿಮೆ ಮಾಡುತ್ತಿದ್ದೇವೆ. ಈ ವಿಚಾರವಾಗಿ ಜಾಹೀರಾತು ಹಾಗೂ ಪತ್ರಿಕಾ ಪ್ರಕಟಣೆ ಹೊರಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಜನರ ನೋವು ನಮಗೂ ಅರಿವಾಗುತ್ತದೆ. ಇದರಲ್ಲಿ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ" ಎಂದು ತಿಳಿಸಿದರು.

# ಮಂಗಳಾ ಕ್ರೀಡಾಂಗಣಕ್ಕೆ ನೀರು ಶುದ್ಧೀಕರಣ ಘಟಕ ಕೊಡುಗೆ

ಮಂಗಳೂರು – ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಕ್ರೀಡಾಂಗಣ (ಮಂಗಳಾ ಕ್ರೀಡಾಂಗಣ)ದಲ್ಲಿ ಪ್ರತಿನಿತ್ಯ ಸುಮಾರು 600 ಕ್ಕೂ ಹೆಚ್ಚು ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ದೈನಂದಿನ ತರಬೇತಿ ಹಾಗೂ ಅಭ್ಯಾಸವನ್ನು ನಡೆಸುತ್ತಿರುತ್ತಾರೆ. ಕ್ರೀಡಾಪಟುಗಳು ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಾಯೋಜಕತ್ವದಡಿ ರೂ. 1.00 ಲಕ್ಷ ಮೌಲ್ಯದ 2 ವಾಟರ್ ಪ್ಯೂರಿಫೈಯರ್‌ಗಳನ್ನು ಒದಗಿಸಲಾಗಿದೆ. ಕಾರ್ಯಕ್ರಮದಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಲಯ ಮುಖ್ಯಸ್ಥ ಮತ್ತು ಜನರಲ್ ಮ್ಯಾನೇಜರ್ ರೇಣು ನಾಯರ್, ಪ್ರಾದೇಶಿಕ ಮುಖ್ಯಸ್ಥ ರಾಜಮಣಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜ, ಖಜಾಂಚಿ ಕೃಷ್ಣ ಶೆಣೈ, ದ.ಕ. ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳು, ಅಂತರಾಷ್ಟ್ರೀಯ ಕ್ರೀಡಾಪಟು ಪುರಂದರ್ ಮುಂತಾದವರು ಉಪಸ್ಥಿತರಿದ್ದರು.

# ಜಮೀನು 1–5 ಪ್ರಕರಣಗಳ ತ್ವರಿತ ವಿಲೇವಾರಿಗೆ ಜಿಲ್ಲಾಧಿಕಾರಿ ಸೂಚನೆ

ಮಂಗಳೂರು – ಜಮೀನು ದಾಖಲೆಗಳ 1–5 ಪ್ರಕರಣಗಳ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಎಂ.ಪಿ ಸೂಚಿಸಿದ್ದಾರೆ. ಅವರು ಬಂಟ್ವಾಳ ತಾಲೂಕು ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಈ ಸೂಚನೆ ನೀಡಿದರು. ಭೂ ಮಂಜೂರಾತಿ ನಂತರ ಸಾರ್ವಜನಿಕರು 1–5 ಮಾಡಲು ಸಲ್ಲಿಸಿರುವ ಸಾಕಷ್ಟು ಅರ್ಜಿಗಳು ಬಾಕಿ ಇದೆ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಗಳಾಗುತ್ತಿರುವ ಬಗ್ಗೆ ಮಾಹಿತಿ ಇದೆ. ಆದುದರಿಂದ ಎಲ್ಲಾ ತಾಲೂಕು ಕಚೇರಿಗಳಲ್ಲಿ 1–5 ಪ್ರಕರಣಗಳ ಅರ್ಜಿಗಳನ್ನು ಆದ್ಯತೆಯಲ್ಲಿ ವಿಲೇವಾರಿ ಮಾಡಬೇಕು ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ತಾಲೂಕು ಕಚೇರಿಯ ರೆಕಾರ್ಡ್ ರೂಂಗೆ ಭೇಟಿ ನೀಡಿದ ಅವರು ದಾಖಲೆಗಳ ಡಿಜಿಟಲೈಸೇಶನ್ ಪ್ರಕ್ರಿಯೆಯನ್ನು ವೀಕ್ಷಿಸಿದರು.

# ಸಕಾಲ ಅರ್ಜಿ ವಿಲೇವಾರಿ: ದ.ಕ. ಪ್ರಥಮ

ಮಂಗಳೂರು – ಸಕಾಲ ಅರ್ಜಿಗಳ ವಿಲೇವಾರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದಿದೆ. ಮಾರ್ಚ್ ತಿಂಗಳಲ್ಲಿ ಒಟ್ಟು 109562 ಅರ್ಜಿಗಳು ಸಕಾಲ ಮಿಷನ್ ಅಡಿಯಲ್ಲಿ ವಿಲೇವಾರಿಯಾಗಿದೆ. 3583 ಅರ್ಜಿಗಳು ತಿರಸ್ಕೃತಗೊಂಡಿದೆ. ಶೇ.96ರಷ್ಟು ಅರ್ಜಿಗಳು ನಿಗದಿತ ಅವಧಿಯಲ್ಲಿ ವಿಲೇವಾರಿಯಾಗಿದೆ. ಈ ಮೂಲಕ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

# ಜಂಕ್ಷನ್ ನಾಮಕರಣ: ಆಕ್ಷೇಪಣೆ ಆಹ್ವಾನ

ಮಂಗಳೂರು – ಮಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.40ರಲ್ಲಿ ಬರುವ ಬಂಟ್ಸ್ ಹಾಸ್ಟೆಲ್‌ನಿಂದ ಬರುವ ರಸ್ತೆ, ಹಂಪನಕಟ್ಟೆಯಿಂದ ಬರುವ ಮುಲ್ಕಿ ಸುಂದರಾಂ ಶೆಟ್ಟಿ ರಸ್ತೆ ಹಾಗೂ ಶಿವರಾಮ ಕಾರಂತ ರಸ್ತೆ ಸೇರುವ ಜಂಕ್ಷನ್‌ಗೆ "ಡಾ. ಬಿ.ಆರ್ ಅಂಬೇಡ್ಕರ್" ವೃತ್ತವೆಂದು ನಾಮಕರಣ ಮಾಡಲು ನಿರ್ಣಯಿಸಲಾಗಿದೆ. ಆದುದರಿಂದ ಈ ಪ್ರಕಟಣೆ ಪ್ರಕಟಿಸಿದ ಒಂದು ತಿಂಗಳ ಒಳಗೆ ಈ ಬಗ್ಗೆ ಸಾರ್ವಜನಿಕರಲ್ಲಿ ಆಕ್ಷೇಪಣೆ, ಸಲಹೆ ನೀಡಬಯಸುವವರು ಕಛೇರಿಗೆ ಲಿಖಿತವಾಗಿ ನೀಡುವಂತೆ ಮಹಾಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ತಂಬಾಕು ದಾಳಿ : ದಂಡ ಸಂಗ್ರಹ

ಶಿವಮೊಗ್ಗ : ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ದಿನಾಂಕ 28.03.2025 ರಂದು ಶಿವಮೊಗ್ಗ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಕೋಟ್ಪ ಕಾಯ್ದೆ ಉಲ್ಲಂಘಿಸುವವರ ವಿರುದ್ಧ ದಾಳಿಗಳನ್ನು ಹಮ್ಮಿಕೊಳ್ಳಲಾಯಿತು. ಒಟ್ಟು 18 ಪ್ರಕರಣಗಳನ್ನು ದಾಖಲಿಸಿ, ಸ್ಥಳದಲ್ಲೇ ರೂ. 3000 ದಂಡವನ್ನು ಸಂಗ್ರಹಿಸಲಾಯಿತು. ತಂಡದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಶೇಖರ್, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಲಹೆಗಾರ ಹೇಮಂತ್ ರಾಜ್ ಅರಸ್, ಸಮಾಜ ಕಾರ್ಯಕರ್ತ ರವಿರಾಜ್ ಜಿ. ಕೆ. ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ್, ಮಹಾನಗರಪಾಲಿಕೆ ಆರೋಗ್ಯ ನಿರೀಕ್ಷಣಾಧಿಕಾರಿ ವಿಕಾಸ್, ಆರೋಗ್ಯ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ಆಕಾಶವಾಣಿಯಲ್ಲಿ ಜಿಲ್ಲಾ ಪ್ರವಾಸಿ ತಾಣಗಳ ವಿಶೇಷ ಕಾರ್ಯಕ್ರಮ

ಶಿವಮೊಗ್ಗ : ಶಿವಮೊಗ್ಗ ಜಿಲ್ಲೆ ಪ್ರವಾಸಿಗರ ಸ್ವರ್ಗ, ಶಿವಮೊಗ್ಗ ಜಿಲ್ಲೆಯಾದ್ಯಂತ ಹಲವಾರು ಪ್ರವಾಸಿತಾಣಗಳಿದ್ದು ಈ ಎಲ್ಲಾ ಪ್ರವಾಸಿ ತಾಣಗಳ ಪರಿಚಯವನ್ನು ಸಾರ್ವಜನಿಕರಿಗೆ ತಿಳಿಸಲು ಜಿಲ್ಲಾ ಪ್ರವಾಸಿತಾಣಗಳ ವಿಶೇಷ ಕಾರ್ಯಕ್ರಮ ಸರಣಿ ಪ್ರತಿ ಗುರುವಾರ ಬೆಳಿಗ್ಗೆ 7.15ಕ್ಕೆ ಆಕಾಶವಾಣಿ ಭದ್ರಾವತಿಯಲ್ಲಿ ಪ್ರಸಾರವಾಗಲಿದೆ. ಶಿವಮೊಗ್ಗದ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಎಂ.ಎನ್. ಸುಂದರರಾಜ್ ಅವರು ವಿವಿಧ ಪ್ರವಾಸಿತಾಣಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಾಡಿಗಳಿಗೂ ಸರ್ಕಾರದ ಪಂಚ ಗ್ಯಾರಂಟಿ ತಲುಪಬೇಕು

ಮಡಿಕೇರಿ : ಜಿಲ್ಲೆಯ ಹಾಡಿಗಳಿಗೂ ಸರ್ಕಾರದ ಪಂಚ ಗ್ಯಾರಂಟಿಗಳನ್ನು ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಪಂಚ ಗ್ಯಾರಂಟಿ ಯೋಜನೆ ಸಮಿತಿಯ ಉಪಾಧ್ಯಕ್ಷರಾದ ಪಂಕಜ ಅವರು ತಿಳಿಸಿದರು. ಸದಸ್ಯರಾದ ಮಂದ್ರೀರ ಮೋಹನ್‌ದಾಸ್ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು. ಫಲಾನುಭವಿಗಳಿಂದಲೇ ಅಭಿಪ್ರಾಯ ಸಂಗ್ರಹಿಸುವ ಕಾರ್ಯವಾಗಬೇಕು. ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದರು. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅಬ್ದುಲ್ ನಬಿ ಅವರು ಮಾತನಾಡಿ, ತಾಲೂಕು ಮಟ್ಟದಲ್ಲಿಯೇ ಫಲಾನುಭವಿಗಳ ಯಶೋಗಾಥೆ ಸಂಗ್ರಹ ಕಾರ್ಯವಾಗಬೇಕು ಎಂದು ಹೇಳಿದರು.

# ಸರಕಾರಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಸ್ಪೀಕರ್ ಅಸ್ತು



ಮಂಗಳೂರು: ಮಾಡೂರಿನ ಜನತೆಯ ಬಹುಬೇಡಿಕೆಯ ಸರಕಾರಿ ಶಾಲೆಯನ್ನು ಆಂಗ್ಲಮಾಧ್ಯಮ ಶಾಲೆಯನ್ನಾಗಿ ಪರಿವರ್ತಿಸುವ ಯೋಜನೆಗೆ ಶಾಸಕರು ಹಾಗೂ ವಿಧಾನಸಭಾ ಅಧ್ಯಕ್ಷರು ಯು.ಟಿ.ಖಾದರ್ ಗ್ರೀನ್ ಸಿಗ್ನಲ್ ನೀಡಿದ್ದು, ಸರಕಾರದಿಂದ ಅನುದಾನ ಬರುವವರೆಗೆ ತನ್ನ ವೇತನದಿಂದ ರೂ.1 ಲಕ್ಷ ವನ್ನು ಆಂಗ್ಲಮಾಧ್ಯಮ ಶಾಲೆಯ ಕಾರ್ಯಾಚರಣೆಗೆ ನೀಡುವುದಾಗಿ ಭರವಸೆ ನೀಡಿದ್ದಾರೆ.ಸರಕಾರಿ ಶಾಲೆ ಉನ್ನತೀಕರಣದ ಪ್ರಸ್ತಾವ ಕೇಳಿಬಂದ ಹಿನ್ನೆಲೆಯಲ್ಲಿ ಮಾಡೂರು ಶಾಲೆಯಲ್ಲಿ, ಅಭಿವೃದ್ಧಿ ಸಮಿತಿಯೊಂದಿಗೆ ಎರಡನೇ ಬಾರಿ ಸಭೆ ನಡೆಸಿದ ಅವರು ಶಿಕ್ಷಣಾಧಿಕಾರಿಗಳಿಗೆ ಆಂಗ್ಲ ಮಾಧ್ಯಮ ಶಾಲೆಯನ್ನು ಆರಂಭಿಸುವಂತೆ ಸೂಚಿಸಿದ್ದಾರೆ. ಪೂರಕ ದಾಖಲೆಗಳೆಲ್ಲವನ್ನು ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ ಸಿದ್ಧಪಡಿಸುವುದಾಗಿ ತಿಳಿಸಿದ ಅವರು ಎಲ್ ಕೆ.ಜಿ ಯುಕೆಜಿ ಒಂದನೇ ತರಗತಿಗೆ ದಾಖಲಾತಿಗಳನ್ನು ಆರಂಭಿಸುವಂತೆ ತಿಳಿಸಿದ್ದಾರೆ. ಶಾಲೆಯಲ್ಲಿ ಉತ್ತಮ ಶಿಕ್ಷಣ ನೀಡುವುದು ಶಿಕ್ಷಕರ ಕರ್ತವ್ಯ, ವಿದ್ಯಾರ್ಥಿಗಳ ಸಂಖ್ಯೆಯನ್ನು ಸಮಿತಿ, ಶಿಕ್ಷಕ ವೃಂದದೊಂದಿಗೆ ಸೇರಿಕೊಂಡು ನಡೆಸಬೇಕು. ಎಲ್‌ಕೆಜಿ, ಯುಕೆಜಿಯಲ್ಲಿ ಒಟ್ಟು 15 ವಿದ್ಯಾರ್ಥಿಗಳು ಕಡ್ಡಾಯವಾಗಿ ಇರಲೇಬೇಕು ಎಂದು ಸೂಚಿಸಿದರು.

# ಬೆಲೆ ಏರಿಕೆ ಗಗನಕ್ಕೆ, ಅಭಿವೃದ್ಧಿ ಪಾತಾಳಕ್ಕೆ – ಶಾಸಕ ಕಾಮತ್



ಮಂಗಳೂರು: ಕೇವಲ 20 ತಿಂಗಳಲ್ಲಿ ಮೂರನೇ ಬಾರಿ ಹಾಲಿನ ದರ ಏರಿಕೆ ಮಾಡಿದೆ.ಈ ಸರ್ಕಾರ ಹಾಲಿನ ದರವನ್ನು 9 ಏರಿಕೆ ಮಾಡಿದ್ದು ನಿಜವಾಗಿಯೂ ಹೈನುಗಾರಿಕೆಯನ್ನೇ ನಂಬಿರುವ ರೈತರಿಗೆ ದರ ಏರಿಕೆಯ ಲಾಭ ಹೋದರೆ ಯಾರೂ ವಿರೋಧ ಮಾಡುವುದಿಲ್ಲ. ಆದರೆ ಪ್ರತೀ ಬಾರಿಯೂ ರೈತರ ಹೆಸರಿನಲ್ಲಿ ಹಾಲಿನ ಬೆಲೆ ಏರಿಕೆ ಮಾಡಿ ಜನಸಾಮಾನ್ಯರನ್ನು ಲೂಟಿ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ, ವಾಸ್ತವದಲ್ಲಿ ಹಾಲು ಉತ್ಪಾದಕರಿಗೆ ಸೇರಬೇಕಾಗಿದ್ದ 650 ಕೋಟಿಗೂ ಅಧಿಕ ಪ್ರೋತ್ಸಾಹ ಧನವನ್ನೇ ಇನ್ನೂ ಬಾಕಿ ಉಳಿಸಿಕೊಂಡಿದೆ. ರೈತರ ಹೆಸರಿನಲ್ಲಿ ಇವರು ನಮ್ಮನ್ನು ಲೂಟಿ ಮಾಡುತ್ತಿದ್ದಾರೆ ಎಂಬ ಭಾವನೆ ಜನಸಾಮಾನ್ಯರಲ್ಲಿ ದಟ್ಟವಾಗುತ್ತಿದ್ದು ಕಾಂಗ್ರೆಸ್ ಸರ್ಕಾರ ರಾಜ್ಯದ ಜನರ ವಿಶ್ವಾಸವನ್ನು ಕಳೆದುಕೊಂಡಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಕಿಡಿ ಕಾರಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಗೃಹ ಬಳಕೆ ವಿದ್ಯುತ್ ದರವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿ ಜನರಿಗೆ ಶಾಕ್ ನೀಡಿದೆ. ಗೃಹ ಬಳಕೆ ವಿದ್ಯುತ್‌ನ ಪ್ರತಿ ಯೂನಿಟ್ ದರದಲ್ಲಿ 10 ಪೈಸೆ ಇಳಿಕೆ ಮಾಡಿದ್ದೇವೆ ಎನ್ನುವ ಇವರು, ಗ್ರಾಹಕರಿಗೆ ಮಂಜೂರಾದ ಪ್ರತಿ ಕೆ.ವಿಗೆ 25 ಏರಿಕೆ ಮಾಡಿದ್ದಾರೆ. ಒಂದು ಕಡೆ ಉಚಿತ ಕರೆಂಟ್ ಎನ್ನುತ್ತಾ, ಇನ್ನೊಂದು ಕಡೆ ಕರೆಂಟ್ ದರ ಹೆಚ್ಚಿಸುತ್ತಾ ಬಂದ ಕಾಂಗ್ರೆಸ್ ಸರ್ಕಾರದ ಮಹಾ ಮೋಸ ಇದೀಗ ಎಲ್ಲರಿಗೂ ಅರಿವಾಗಿದೆ ಎಂದರು.

# ಸಮಯ ಕೂಡಿಬಂದಿದೆ–ಕ್ಯಾ. ಬ್ರಿಜೇಶ್ ಚೌಟ



ಮಂಗಳೂರು: ದೇಶದಲ್ಲಿ ಜಾರಿಯಲ್ಲಿರುವ ಅಸಂವಿಧಾನಕ ಹಾಗೂ ನ್ಯಾಯಸಮ್ಮತವಲ್ಲದ ವಕ್ಫ್ ಕಾಯ್ದೆಗೆ ಸಂಬಂಧಿಸಿದ ವಕ್ಫ್ ತಿದ್ದುಪಡಿ ಮಸೂದೆಯನ್ನು ಬೆಂಬಲಿಸುವಂತೆ ಕೇರಳ ಕ್ಯಾಥೋಲಿಕ್ ಬಿಷಪ್ಸ್ ಕೌನ್ಸಿಲ್ ಲೋಕಸಭಾ ಸದಸ್ಯರುಗಳಿಗೆ ಮನವಿ ಮಾಡಿದೆ. ಸದ್ಯ ದೇಶದಲ್ಲಿ ಜಾರಿಯಲ್ಲಿರುವ ಈ ವಕ್ಫ್ ಕಾಯ್ದೆಯಿಂದ ಜನಸಾಮಾನ್ಯರಿಗೆ ಯಾವ ರೀತಿಯಲ್ಲಿ ತೊಂದರೆಯಾಗುತ್ತಿದೆ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ಈ ಕಾಯ್ದೆಯಿಂದಾಗಿ ಪ್ರತಿಯೊಂದು ಸಮುದಾಯದವರು ಕೂಡ ಭೂ ಒತ್ತುವರಿ, ಭೂ ಮಾರಾಟ, ಚಾರಿಟಿ ಹೆಸರಿನಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ. ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಈ ಹಿಂದೆ ಮಾಡಿರುವ ದೊಡ್ಡ ತಪ್ಪನ್ನು ಸರಿಪಡಿಸುವ ಸಮಯ ಬಂದಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಬ್ಕಾ ಸಾತ್ ಸಬ್ಕಾ ವಿಕಾಸ್ ಅಡಿ ವಿಕಸಿತ ಭಾರತದ ಪರಿಕಲ್ಪನೆಯನ್ನು ನಿಜಗೊಳಿಸುವತ್ತ ಮಹತ್ವದ ಹೆಜ್ಜೆಯಿರಿಸಿದ್ದಾರೆ. ಈ ಹಿನ್ನಲೆಯಲ್ಲಿ ಸಮಾಜದ ಎಲ್ಲ ಜಾತಿ–ವರ್ಗದಲ್ಲಿ ಧ್ವನಿಯಿಲ್ಲದವರು ಹಾಗೂ ಅತಿ ಕಡುಬಡವರ ಪರವಾಗಿ ನಾವೆಲ್ಲ ಒಟ್ಟಾಗಿ ನಿಲ್ಲಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

# ಆದಿವಾಸಿ ಕೊರಗ ಸಮುದಾಯಕ್ಕೆ ಅನ್ಯಾಯ: ಡಾ. ಕೃಷ್ಣಪ್ಪ ಕೊಂಚಾಡಿ



ಮಂಗಳೂರು: ಸಾಣೂರು ಬಿಕರ್ಣಕಟ್ಟೆ ಹೆದ್ದಾರಿ ಅಗಲೀಕರಣಕ್ಕಾಗಿ ವಾಮಂಜೂರಿನ ಮಂಗಳ ಜ್ಯೋತಿಯಲ್ಲಿ ನೂರಾರು ವರ್ಷಗಳಿಂದ ವಾಸವಾಗಿರುವ ಕೊರಗ ಸಮುದಾಯದ ಕುಟುಂಬಗಳನ್ನು ಬೀದಿಗೆ ತಳ್ಳುವ ಮಹಾನಗರ ಪಾಲಿಕೆ ಮತ್ತು ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಧೋರಣೆ ಅಮಾನುಷ ಮತ್ತು ತೀವ್ರ ಖಂಡನೀಯ ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ. ಕೃಷ್ಣಪ್ಪ ಕೊಂಚಾಡಿ ಹೇಳಿದರು. ಮನಪಾ ಅಧಿಕಾರಿಗಳು ನೀಡಿದ ಭರವಸೆಯನ್ನು ಮರೆತು ಬುಲ್ಡೋಜರ್ ಕಾರ್ಯಾಚರಣೆ ನಡೆಸಲು ಮುಂದಾಗಿರುವ ಮತ್ತು ಹೆದ್ದಾರಿ ಇಲಾಖೆಯ ಅಧಿಕಾರಿಗಳ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ ಮಂಗಳೂರು ಮಹಾನಗರ ಪಾಲಿಕೆಯ ಮುಂದೆ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

# ಎ.9ರಂದು ಮಂಗಳೂರಿಗೆ ಬಿಜೆಪಿಯ ಜನಾಕ್ರೋಶ ಯಾತ್ರೆ




ಮಂಗಳೂರು : ರಾಜ್ಯ ಸರಕಾರದ ವೈಫಲ್ಯದ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ಕೈಗೊಂಡಿದ್ದು, ಎ.9ರಂದು ಜನಾಕ್ರೋಶ ಯಾತ್ರೆ ಮಂಗಳೂರಿಗೆ ಆಗಮಿಸಲಿದೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ತಿಳಿಸಿದ್ದಾರೆ. ದ.ಕ. ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಯಾತ್ರೆಯ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದರು. ರಾಜ್ಯದ ಜನತೆಗೆ ಯುಗಾದಿ ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಲು ರಾಜ್ಯ ಕಾಂಗ್ರೆಸ್ ಸರಕಾರ ಅವಕಾಶ ನೀಡಿಲ್ಲ. ಹಾಲು ಮತ್ತು ಮೊಸರಿನ ದರ ಲೀಟರ್‌ಗೆ ನಾಲ್ಕು ರೂ., ವಿದ್ಯುತ್ ದರ ಯೂನಿಟ್‌ಗೆ 36 ಪೈಸೆ ಹೆಚ್ಚಿಸಿ ಜನತೆಗೆ ಆಘಾತ ನೀಡಿದೆ. ವಾಹನ ಖರೀದಿ ತೆರಿಗೆ, ಮುದ್ರಾಂಕ ಶುಲ್ಕ ಸಹಿತ ಅಗತ್ಯ ವಸ್ತುಗಳ ಬೆಲೆಯೇರಿಕೆ ಮಾಡುವ ಮೂಲಕ ದುಬಾರಿಯ ವಾತಾವರಣವನ್ನು ಕಾಂಗ್ರೆಸ್ ಸರಕಾರ ಸೃಷ್ಟಿಸಿದೆ. ಅಧಿಕಾರಕ್ಕೆ ಬಂದ ಬಳಿಕ ಒಟ್ಟು ಮೂರು ಬಾರಿ ಹಾಲಿನ ದರ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

# ಸಿದ್ದಾಪುರದಲ್ಲಿ ಲಿಂಗಮುದ್ರೆ ಕಲ್ಲು ಪತ್ತೆ !



ಕುಂದಾಪುರ : ಸಿದ್ದಾಪುರ–ಹೊಸಂಗಡಿ ರೋಟರಿ ಕ್ಲಬ್‌ನ ಸಣ್ಣಯ್ಯ ಯಡಿಯಾಳ ಸಭಾಭವನದ ಮುಂಭಾಗದ ಅರವಿಂದ ಶೆಟ್ಟಿ ಅವರ ಜಾಗದಲ್ಲಿ ಲಿಂಗಮುದ್ರೆ ಕಲ್ಲು ಪತ್ತೆಯಾಗಿದೆ. ಸಿದ್ಧಾಪುರದ ವಾಸುಕಿ ಕ್ಲಿನಿಕ್‌ನ ಡಾ.ಜಗದೀಶ್ ಶೆಟ್ಟಿ ಅವರಿಂದ ಮಾಹಿತಿ ಯನ್ನು ಪಡೆದುಕೊಂಡಿದ್ದ ತುಮಕೂರು ವಿಶ್ವ ವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಸಂಶೋಧನಾರ್ಥಿ ವೈಶಾಲಿ ಜಿ.ಆರ್. ಸಿದ್ದಾಪುರ, ಸ್ಥಳಕ್ಕೆ ತೆರಳಿ, ರೋಟರಿ ಮಾಜಿ ಅಧ್ಯಕ್ಷ ಡಿ.ನಾಗೇಂದ್ರ ಯಡಿಯಾಳ, ಶಿಕ್ಷಕಿ ಕೃಷ್ಣವೇಣಿ ಹಾಗೂ ಉದ್ಯಮಿ ಗಣೇಶ್ ಶೆಟ್ಟಿ ಸಹಕಾರದಿಂದ ಮುಳ್ಳು ಗಿಡಗಳಿಂದ ಆವರಿಸಿದ್ದ ಈ ಕಲ್ಲನ್ನು ಸ್ವಚ್ಛಗೊಳಿಸಿ ಕಲ್ಲನ್ನು ಪರೀಕ್ಷಿಸಿದ್ದರು.

# ಎಸ್‌ಸಿಡಿಸಿಸಿ ಬ್ಯಾಂಕ್ ಸಾರ್ವಕಾಲಿಕ ದಾಖಲೆಯ ಲಾಭ: ಡಾ.ಎಮ್‌ಎನ್‌ಆರ್



ಮಂಗಳೂರು : ಎಸ್‌ಸಿಡಿಸಿಸಿ ಬ್ಯಾಂಕಿನ 2025ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ರೂ. 110.40 ಕೋಟಿ ಲಾಭ ಗಳಿಸಿದೆ. ಇದು ಎಸ್‌ಡಿಸಿಸಿ ಬ್ಯಾಂಕ್‌ನ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆಯಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದ ಅಧ್ಯಕ್ಷ ಡಾ। ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ. ಅವರು ಎಸ್‌ಡಿಸಿಸಿ ಬ್ಯಾಂಕಿನ ಅವರಣದಲ್ಲಿ ಕರೆದ ಪತ್ರಿಕಗೋಷ್ಟಿಯಲ್ಲಿ ಮಾಹಿತಿ ನೀಡಿ, ಬ್ಯಾಂಕಿಂಗ್ ಸೇವೆಯಲ್ಲಿ ದೇಶಕ್ಕೆ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಭಿವೃದ್ಧಿಯ ಮುಂಚೂಣಿಯಲ್ಲಿದೆ. ಸಹಕಾರಿ ರಂಗದಲ್ಲಿ ವಿಶಿಷ್ಟ ಹಾಗೂ ವಿನೂತನ ಬ್ಯಾಂಕಿಂಗ್ ಸೇವೆಯನ್ನು ನಗರ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ವಿಶಿಷ್ಟ ಹಾಗೂ ವಿನೂತನ ಬ್ಯಾಂಕಿಂಗ್ ಸೇವೆಯನ್ನು ತನ್ನ 113 ಶಾಖೆಗಳ ಮೂಲಕ ನೀಡುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಜನ ಸಾಮಾನ್ಯರ ಬ್ಯಾಂಕ್ ಆಗಿ ಗುರುತಿಸಿಕೊಂಡಿದೆ. 111 ವರ್ಷಗಳ ಸಾರ್ಥಕ ಸೇವೆಯನ್ನು ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನೀಡುತ್ತಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವರದಿ ವರ್ಷದಲ್ಲಿ ಅಮೋಘ ಸಾಧನೆಗೈದು, ಕಳೆದ ವರ್ಷಕ್ಕಿಂತ ಈ ಬಾರಿ ಲಾಭಾಂಶ ಶೇ 39.59 ಏರಿಕೆಯಾಗಿದೆ (ರೂ.79.09). ಇದು ಎಸ್ ಸಿಡಿಸಿಸಿ ಬ್ಯಾಂಕಿನ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆಯಾಗಿದೆ ಹಾಗೂ ಬ್ಯಾಂಕಿನ ಅನುತ್ಪಾದಕ ಆಸ್ತಿಯ ಪ್ರಮಾಣವು 3.52 ಶೇಕಡದಿಂದ 2.71 ಶೇಕಡಕ್ಕೆ ಇಳಿಕೆಯಾಗಿರುವುದು ಒಂದು ಗಮನಾರ್ಹ ಸಾಧನೆಯಾಗಿದೆ ಎಂದು ಡಾ. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

# ಸಾಧಕರಿಗೆ ಬಿಜೆಪಿ ಮಂಗಳೂರು ವತಿಯಿಂದ ಸನ್ಮಾನ



ಮಂಗಳೂರು: ಇತ್ತೀಚೆಗೆ ಕರ್ನಾಟಕ ರಾಜ್ಯ ಮಾಧ್ಯಮ ಅಕಾಡೆಮಿ ಆಯೋಜಿಸಿದ ಛಾಯಾಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿಗೆ ಭಾಜನರಾದ ಉದಯವಾಣಿ ದಿನಪತ್ರಿಕೆಯ ಛಾಯಾಗ್ರಾಹಕರಾದ ಶ್ರೀ ಸತೀಶ್ ಇರಾ ಹಾಗೂ ವಿಶೇಷ ಚೇತನರ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸುತ್ತಿರುವ ಬಜಾಲ್ ಜಲ್ಲಿಗುಡ್ಡೆ ನಿವಾಸಿ ಶ್ರೀ ಶ್ರಮಿತ್ ಎಂ ಅವರನ್ನು ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ವತಿಯಿಂದ ಸನ್ಮಾನಿಸಲಾಯಿತು. ನಗರದ ಅಟಲ್ ಸೇವಾ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ವೇದವ್ಯಾಸ್ ಕಾಮತ್ ರವರು, ಸತತ ಪರಿಶ್ರಮವೇ ಸಾಧಕರ ಮೂಲ ಮಂತ್ರ. ಶ್ರೇಷ್ಠ ಸಾಧಕರು ನಮ್ಮ ಸುತ್ತಮುತ್ತಲಿನಲ್ಲಿಯೂ ಇರುತ್ತಾರೆ. ಅಂತಹವರ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಿದರೆ ಭವಿಷ್ಯದಲ್ಲಿ ಇನ್ನಷ್ಟು ಸಾಧಕರಿಗೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಇಂದು ಸನ್ಮಾನ ಸ್ವೀಕರಿಸಿದ ಸಾಧಕರು ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆಯ ಶಿಖರವನ್ನೇರಲಿ ಎಂದು ಹಾರೈಸಿದರು.

# ಭಾಷೆ, ಸಂಸ್ಕೃತಿಯನ್ನು ಗೌರವಿಸಿ–ಡಾ. ರಾಜಶೇಖರ್



ಮಂಗಳೂರು :ಭಾಷೆ, ಸಂಸ್ಕೃತಿ, ಕಲೆ ಯನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ತೆಲುಗು ಸಿನಿಮಾ ನಟ ಡಾ ರಾಜಶೇಖರ್ ಹೇಳಿದರು.ತೆಲುಗು ಕಲಾ ಸಮಿತಿ ವತಿಯಿಂದ ಪಣಂಬೂರು ನವ ಮಂಗಳೂರು ಬಂದರು ಪ್ರಾಧಿಕಾರ ಸಭಾಂಗಣದಲ್ಲಿ ಆಯೋಜಿಸಲಾದ ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ತೆಲುಗು ಭಾಷೆ ಮಾತನಾಡುವವರು ಒಟ್ಟಾಗಿ ಸೇರಿ ಎಲ್ಲಾ ರೀತಿಯ ಹಬ್ಬಯನ್ನು ಕುಟುಂಬದ ಹಬ್ಬವಾಗಿ ಆಚರಣೆ ಮಾಡುವುದು ತುಂಬಾ ಖುಷಿಯ ವಿಚಾರವಾಗಿದೆ ಎಂದು ಹೇಳಿದರು. ಇದೇ ವೇಳೆ ಸ್ಪಂದನ ಮ್ಯಾಗಜಿನ್‌ನನ್ನು ತೆಲುಗು ನಟಿ ಜೀವಿತಾ ರಾಜಶೇಖರ್ ಬಿಡುಗಡೆ ಗೊಳಿಸಿದರು.ನವ ಮಂಗಳೂರು ಬಂದರು ಪ್ರಾಧಿಕಾರ ಅಧ್ಯಕ್ಷ ಡಾ ವೆಂಕಟರಮಣ ಅಕ್ಕರಾಜು ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಮತಿ ಸುಷ್ಮಾ ವೆಂಕಟರಮಣ ಅಕ್ಕರಾಜು, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ಶ್ರೀನಿವಾಸ್ ನಾಯಕ್ ಇಂದಾಜೆ ಮುಖ್ಯ ಅತಿಥಿಯಾಗಿದ್ದರು. ಸಮಿತಿ ಗೌರವಾಧ್ಯಕ್ಷ ಸಾಂಬಶಿವರಾವ್ ನಡೆಲ್ಲಾ,ಅಧ್ಯಕ್ಷ ರಾಮ ಚಂದರ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ರಾವ್,ಮಹಿಳಾ ವಿಭಾಗದ ಅಧ್ಯಕ್ಷೆ ನಳಿನಿ, ಉಪಸ್ಥಿತರಿದ್ದರು.

# ವೆನ್‌ಲಾಕ್, ಪಿಲಿಕುಲ ಅಭಿವೃದ್ಧಿಗೆ ಎಂಆರ್‌ಪಿಎಲ್ ನೆರವು ಹಸ್ತಾಂತರ



ಎಂ.ಆರ್.ಪಿ.ಎಲ್. ಸಂಸ್ಥೆ ವತಿಯಿಂದ ಸಿಎಸ್ ಆರ್ ನಿಧಿಯಿಂದ ವೆನ್ ಲಾಕ್ ಆಸ್ಪತ್ರೆ ಹಾಗೂ ಪಿಲಿಕುಲ ನಿಸರ್ಗಧಾಮಕ್ಕೆ ಕೊಡುಗೆ ನೀಡಲಾಯಿತು. ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಅವರು ಸಿಎಸ್‌ಆರ್ ಪತ್ರವನ್ನು ಅಧಿಕಾರಿಗಳಿಗೆ ವಿತರಿಸಿದರು. ಈ ನಿಧಿಯಿಂದ ವೆನ್ ಲಾಕ್ ಆಸ್ಪತ್ರೆಯ ಮೆಡಿಸಿನ್ ಬ್ಲಾಕ್‌ನಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ನೂತನವಾದ ಸರ್ಜಿಕಲ್ ವಾರ್ಡ್ ನಿರ್ಮಾಣಗೊಳ್ಳಲಿದ್ದು, ಹೊಸದಾಗಿ 132 ಹಾಸಿಗೆಗಳು ಸೇರ್ಪಡೆಗೊಳ್ಳಲಿವೆ. ಪಿಲಿಕುಲ ವಿಜ್ಞಾನ ಕೇಂದ್ರ ಆವರಣದಲ್ಲಿ ರೂ. 5.43 ಕೋಟಿ ವೆಚ್ಚದಲ್ಲಿ ಖಗೋಳ ಶಾಸ್ತ್ರ ಗ್ಯಾಲರಿ ನಿರ್ಮಾಣಗೊಳ್ಳಲಿದೆ. ಈ ಸಂದರ್ಭದಲ್ಲಿ ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್, ಅಪರ ಜಿಲ್ಲಾಧಿಕಾರಿ ಸಂತೋಷ್ ಕುಮಾರ್, ಎಂ.ಆರ್.ಪಿ.ಎಲ್.ಎಂ.ಡಿ. ಮುಂಡ್ಕೂರು ಶ್ಯಾಮ್ ಪ್ರಸಾದ್ ಕಾಮತ್, ವೆನ್‌ಲಾಕ್ ಅಧೀಕ್ಷಕ ಡಾ. ಶಿವಪ್ರಕಾಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಮ್ಮಯ್ಯ, ಪಿಲಿಕುಲ ಆಯುಕ್ತ ಅರುಣ್ ಕುಮಾರ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಮಂಗಳಾದೇವಿ ದೇವಸ್ಥಾನ ರಸ್ತೆ ನಾಮಫಲಕ ಅನಾವರಣ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ ಆರ್.ಟಿ.ಓ ಕಚೇರಿ ಬಳಿ "ಶ್ರೀ ಮಂಗಳಾದೇವಿ ದೇವಸ್ಥಾನ ರಸ್ತೆ" ಎಂಬ ನಾಮಫಲಕವನ್ನು ಹಲವು ಗಣ್ಯರ ಉಪಸ್ಥಿತಿಯಲ್ಲಿ ಶಾಸಕ ವೇದವ್ಯಾಸ ಕಾಮತ್ ರವರು ಅನಾವರಣಗೊಳಿಸಿ ನಂತರ ಮಾತನಾಡಿ, ಮಂಗಳಾದೇವಿ ದೇವಸ್ಥಾನ ಎಂಬುದು ಈ ಊರಿಗೆ ಮಾತ್ರವಲ್ಲ, ಪರವೂರು ಸೇರಿದಂತೆ ನಾಡಿನ ಪ್ರಸಿದ್ಧ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲೊಂದಾಗಿದೆ. ಇಂತಹ ಪುಣ್ಯಕ್ಷೇತ್ರದ ಹೆಸರಿನಲ್ಲಿ ಇನ್ನು ಮುಂದೆ ಈ ರಸ್ತೆ ಕರೆಯಲ್ಪಡುವುದು ಹರ್ಷ ತಂದಿದೆ ಎಂದರು. ಶ್ರೀ ಮಂಗಳಾದೇವಿ ದೇವಸ್ಥಾನ ರಸ್ತೆಯಿಂದ, ಎಬಿ ಶೆಟ್ಟಿ ವೃತ್ತದಿಂದ, ಮಂಕಿಸ್ಟ್ಯಾಂಡ್ ಮುಖಾಂತರ ಮಂಗಳಾದೇವಿ ದೇವಸ್ಥಾನ ಶಮಿ ಕಟ್ಟೆಯಾಗಿ ಫಸ್ಟ್ ರೈಲ್ವೆ ಬ್ರಿಡ್ಜ್‌ವರೆಗಿನ ರಸ್ತೆ ಇದಾಗಿದ್ದು "ಶ್ರೀ ಮಂಗಳಾದೇವಿ ದೇವಸ್ಥಾನ ರಸ್ತೆ" ಎಂದು ನಾಮಕರಣವಾಗಿದೆ ಎಂದರು.

# ಡಾ. ಎಂ.ಎನ್. ರಾಜೇಂದ್ರ ಕುಮಾರ್ ಗೌರವ ಡಾಕ್ಟರೇಟ್



ಮಂಗಳೂರು: ಸಹಕಾರಿ ಧುರೀಣ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರಿಗೆ ಸಮಾಜ ಸೇವೆ ಸಲ್ಲಿಸಿದ ಅಪೂರ್ವ ಸಾಧನೆಗಾಗಿ ಮಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದೆ. ವಿವಿಯ 43ನೇ ಘಟಿಕೋತ್ಸವದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಗಣ್ಯರ ಸಮ್ಮುಖದಲ್ಲಿ ಪದವಿ ಪ್ರದಾನ ಮಾಡಿದರು. ಈ ಮೂಲಕ ಅವರಿಗೆ ಎರಡನೇ ಬಾರಿಗೆ ಗೌರವ ಡಾಕ್ಟರೇಟ್ ಪದವಿ ಸಿಕ್ಕಿದಂತಾಗಿದೆ. ಈ ಹಿಂದೆ ಸಹಕಾರಿ ಅವರಿಗೆ 2013ರಲ್ಲಿ ಶ್ರೀಲಂಕಾದ ಕೊಲಂಬೋ ಮುಕ್ತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಲಭಿಸಿತ್ತು.



ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## 'ಅಯೋಧ್ಯ ರಾಮ' ವಿಡಿಯೋ ಹಾಡು ಬಿಡುಗಡೆ..



ವಿಶ್ವ ಆರಾಧ್ಯ ದೈವ, ಶಾಂತಿದೂತ, ಜೈ ಶ್ರೀರಾಂ ಕುರಿತಾದ 'ರಾಮ ರಾಮ ರಾಮ ಎಂಬ ರಾಮ ಜಪದಲಿ ಜಗವ ಕಾಣಬಹುದು' ಸಾಲಿನ 'ಭಾರತ ಕಂಡ ಅಯೋಧ್ಯ ರಾಮ' ಮೂರು ನಿಮಿಷದ ವಿಡಿಯೋ ಆಲ್ಬಂ ಹಾಡನ್ನು ಮಾಜಿ ವಿಧಾನ ಪರಿಷತ್ ಸದಸ್ಯ ಲಕ್ಷ್ಮೀನಾರಾಯಣ ಬಿಡುಗಡೆ ಮಾಡಿ ಶುಭ ಹಾರೈಸಿದರು. ಅತ್ರೇಯ ಕ್ರಿಯೇಷನ್ ಲಾಂಚನದಲ್ಲಿ ಡಾ.ಸುಮಿತಾ ಪ್ರವೀಣ್ ಹಾಗೂ ಪ್ರವೀಣ್ ಸಿ ಬಾನು ಮಗಳ ಸಲುವಾಗಿ ನಿರ್ಮಾಣ ಮಾಡಿರುವ ಈ ಹಾಡಿನಲ್ಲಿ ಅವರ ಮಗಳು ಕು. ಋತುಸ್ಪರ್ಶ ಅಭಿನಯಿಸಿದ್ದಾರೆ. ಹಿರಿಯ ನಟ, ನಿರ್ಮಾಪಕ ಗಣೇಶ್‌ರಾವ್ ಕೇಸರ್‌ಕರ್, ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್. ಕೆ. ವಿಶ್ವನಾಥ್, ನೆ ಲ ನರೇಂದ್ರ ಬಾಬು, ನಿರ್ದೇಶಕರುಗಳಾದ ಓಂಕಾರ್ ಪುರುಷೋತ್ತಮ್, ರವೀಂದ್ರವಂಶಿ ಮುಂತಾದವರು ಆಗಮಿಸಿ ಶುಭ ಹಾರೈಸಿದರು.

## 'ಕೆಡಿ' ಚಿತ್ರದ ಎರಡನೇ ಹಾಡು ಬಿಡುಗಡೆ..



ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ಅಭಿನಯದ ಪ್ಯಾನ್ ಇಂಡಿಯಾ 'ಕೆಡಿ' ಚಿತ್ರಕ್ಕೆ ಕೆ.ವಿ.ಎನ್. ಪ್ರೊಡಕ್ಷನ್ಸ್ ದೊಡ್ಡ ಮಟ್ಟದಲ್ಲಿ ಬಂಡವಾಳ ಹೂಡಿದೆ. ಈಗಾಗಲೇ ಈ ಚಿತ್ರದ ಮೊದಲ ಹಾಡು, ಬಿಡುಗಡೆಗೊಂಡು ಸದ್ದು ಮಾಡಿದೆ. ಇದೀಗ ಚಿತ್ರದ ಮತ್ತೊಂದು ಹಾಡು ಸೆಟ್ಟಾಗಲ್ಲಾ ಕಣೆ ನಂಗೂ ನಿಂಗೂ ಬಿಡುಗಡೆಯಾಗಿದೆ. ಪ್ರೇಮ್ ಅವರೇ ರಚಿಸಿರುವ ಈ ಹಾಡಿನ್ನು ಹೆಸರಾಂತ ಗಾಯಕ ಮಿಖಾ ಸಿಂಗ್ ಹಾಡಿದ್ದಾರೆ. ಆದರೆ ಶೂಟಿಂಗ್ ಇನ್ನೂ ಆಗಬೇಕಿದೆ. ಈ ಹಾಡಿಗೆ ಕೇಳುಗರೇ ಕೊರಿಯಾಗ್ರಾಫರ್. ಈ ಹಾಡನ್ನುಕೇಳಿ, ಅದಕ್ಕೆ ಸೂಕ್ತವಾದ ಒಂದು ಹುಕ್ ಸ್ಟೆಪ್‌ನ್ನು ಪ್ರೇಕ್ಷಕರು ಹಾಕಿ ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಹಾಕಿ ಚಿತ್ರತಂಡಕ್ಕೆ ಕಳಿಸಬೇಕು. ಅದರಲ್ಲಿ ಬೆಸ್ಟ್ ಮೋಮೆಂಟ್ ಸೆಲೆಕ್ಟ್ ಮಾಡಿ ಹಾಡಲ್ಲಿ ಬಳಸಿಕೊಳ್ಳಲಾಗುವುದೆಂದು ನಿರ್ದೇಶಕ ಪ್ರೇಮ್ ತಿಳಿಸಿದ್ದಾರೆ.

## ಏಪ್ರಿಲ್ 18ಕ್ಕೆ ಬುಡಕಟ್ಟು ಕತೆಯಾಧಾರಿತ "ಕೋರ"

ಬುಡಕಟ್ಟು ಜನರ ಬದುಕು ಬವಣೆಯ ಕತೆ ಮತ್ತು ಕೊರಗಜ್ಜನ ಆರಾಧನೆಯ ಕತೆಯುಳ್ಳ "ಕೋರಾ" ಕನ್ನಡ ಸಿನಿಮಾ ಇದೇ ಎಪ್ರಿಲ್ 18ರಂದು ದೇಶಾದ್ಯಂತ ತೆರೆ ಕಾಣಲಿದೆ. ತೆಲುಗು, ತಮಿಳು ಮತ್ತು ಕನ್ನಡ ಭಾಷೆಯಲ್ಲಿ ಚಿತ್ರ ತೆರೆಗೆ ಬರುತ್ತಿದ್ದು, ಪಾನ್ ಇಂಡಿಯಾ ಸಿನಿಮಾವಾಗಿ ಜನರನ್ನು ಆಕರ್ಷಿಸಲಿದೆ ಎಂದು ಚಿತ್ರದ ಖಳನಾಯಕ ಹಾಗೂ ನಿರ್ಮಾಪಕ ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷರೂ ಆಗಿರುವ ಪಿ. ಮೂರ್ತಿ ನಗರದ ಖಾಸಗಿ ಹೋಟೇಲಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ಮಾಹಿತಿ ಹಂಚಿಕೊಂಡರು. ಕರಾವಳಿ ಭಾಗದ ಕುಕ್ಕೆ ಸುಬ್ರಹ್ಮಣ್ಯ ನಿಂತಿಕಲ್ ಎಸ್ಟೇಟ್, ಸಕಲೇಶಪುರದ ಬಾಳುಪೇಟೆ, ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ. ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ಸುನಾಮಿ ಕಿಟ್ಟಿ ನಾಯಕ ನಟನಾಗಿದ್ದು, ಕೊಡಗಿನ ಚರಿಷ್ಮಾ ಚೌಂದಮ್ಮ ನಾಯಕಿಯಾಗಿ ನಟಿಸಿದ್ದಾರೆ.



## ಏಪ್ರಿಲ್ 4 ರಂದು ಅಣ್ಣಾವ್ರ ಮೊಮ್ಮಗನ ಚಿತ್ರ..

ಮೇರು ನಟ ಡಾ||ರಾಜಕುಮಾರ್ ಅವರ ಮೊಮ್ಮಗ(ಮಗಳ ಮಗ) ಷಣ್ಮುಖ ಗೋವಿಂದರಾಜ್ ನಾಯಕನಾಗಿ ನಟಿಸಿರುವ "ನಿಂಬಿಯಾ ಬನಾದ ಮ್ಯಾಗ" ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಡಾ| ರಾಜಕುಮಾರ್ ಮಗಳು, ಅಳಿಯ, ನಾಯಕ ಷಣ್ಮುಖರ ತಾಯಿ–ತಂದೆ ಲಕ್ಷ್ಮೀ ಹಾಗೂ ಗೋವಿಂದರಾಜು ಅವರು ಟ್ರೇಲರ್ ಅನಾವರಣ ಮಾಡಿ ಮಗನ ಚಿತ್ರಕ್ಕೆ ಶುಭ ಕೋರಿದರು. ಹಿರಿಯ ನಿರ್ಮಾಪಕ ಎಸ್ ಎ ಚಿನ್ನೇಗೌಡ, ಡಾ||ರಾಜಕುಮಾರ್ ಪುತ್ರಿ ಪೂರ್ಣಿಮಾ ರಾಮಕುಮಾರ್ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿ. ಮಾದೇಶ್ ನಿರ್ಮಾಣದ, ಅಶೋಕ್ ಕಡಬ ನಿರ್ದೇಶಿಸಿರುವ ಈ ಚಿತ್ರ ಏಪ್ರಿಲ್ 4 ರಂದು ಬಿಡುಗಡೆಯಾಗಲಿದೆ. ನಿರ್ಮಾಪಕ ವಿ.ಮಾದೇಶ್, ನಾಯಕಿ ತನುಶ್ರೀ, ಚಿತ್ರದಲ್ಲಿ ನಟಿಸಿರುವ "ಮೇಘಮಾಲೆ" ಖ್ಯಾತಿಯ ಸುನಾದ್‌ರಾಜ್, ಸಂದೀಪ್ ಮಲಾನಿ ಮುಂತಾದವರು ಚಿತ್ರದ ಕುರಿತು ಮಾತನಾಡಿದರು.









Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212